
# ದೇವದರ್ಶನ ಗುಡಾರದ ಅಧ್ಯಯನ

## ಅಧ್ಯಯನ # 31



## ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

"ನಿನ್ನ ವಾಕ್ಯವೇ ಸತ್ಯವು" - ಯೋಹಾನನು 17:17

# ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

## ಅಧ್ಯಯನ # 31

## ದೇವದರ್ಶನ ಗುಡಾರದ ಅಧ್ಯಯನ

**<u>ದಯವಿಟ್ಟು ಗಮನಿಸಿ:</u> ಈ ತರಗತಿಯಲ್ಲಿ ತಿಳಿಸಲಾಗಿರುವ ಎಲ್ಲಾ ವಾಕ್ಯಗಳನ್ನು ಸತ್ಯವೇದದಲ್ಲಿ ಓದುವ ಮೂಲಕ ನಿಮ್ಮ ಅಭ್ಯಾಸವನ್ನು ಮುಂದುವರಿಸಿರಿ.**

***ಇಲ್ಲಿ ಉಪಯೋಗಿಸಿರುವ ಅತ್ಯಧಿಕವಾದ ವಾಕ್ಯಭಾಗಗಳು(ಕೆ.ಜೆ.ವಿ) ಭಾಷಾಂತರದಿಂದ ತೆಗೆದುಕೊಳ್ಳಲಾಗಿದೆ.***

**ಈ** ದಿನ ನಾವು ಏನೋ ವಿಶೇಷವಾದ ಒಂದು ವಿಷಯವನ್ನು ಕುರಿತು ಅಭ್ಯಾಸ ಮಾಡಲಿದ್ದೇವೆ, ಅದೇನೆಂದರೆ ದೇವರು ಮೋಶೆಗೆ ಕಟ್ಟಲು ಹೇಳಿದ್ದು – ಹೌದು! ಅರಣ್ಯದಲ್ಲಿ .......ಗುಡಾರವನ್ನು ಮಾಡಿಸಿದನು!

ಕೆಳಗಿನ ವಾಕ್ಯದಲ್ಲಿ ಈ ಗುಡಾರ ಮತ್ತು ಅದನ್ನು ಹೇಗೆ ಮಾಡಿಸಬೇಕೆಂಬ ದೇವರ ವಾಕ್ಯವನ್ನು ಕುರಿತು ಓದೋಣ –

### ವಿಮೋಚನಕಾಂಡ 25:8-9

**"ನಾನು ಅವರ ಮಧ್ಯದಲ್ಲ ವಾಸಿಸುವದಕ್ಕೆ ನನಗೆ ಒಂದು ದೇವಸ್ಥಾನವನ್ನು ಕಟ್ಟಿಸಬೇಕು. ನಾನು ನಿನಗೆತೋರಿಸುವ ಮಾದರಿಯ ಪ್ರಕಾರವೇ ಗುಡಾರವನ್ನೂ ಅದರಲ್ಲಿರುವ ಎಲ್ಲಾ ಸಾಮಾನುಗಳನ್ನೂ ಮಾಡಿಸಬೇಕು."**

ಹೌದು! ಆದ್ದರಿಂದ ದೇವರು ಮೋಶೆಯನೊಂದಿಗೆ ಮಾತನ್ನಾಡಿ ಆ "ಮಾದರಿಯನ್ನು" ಕೊಟ್ಟನು ಮತ್ತು ಈ ಗುಡಾರವನ್ನು ಮಾಡಿಸುವಾಗ ಮತ್ತು ಕಟ್ಟುವಾಗ ಅದರ ಪ್ರತಿಯೊಂದು ಸಣ್ಣ ಸಣ್ಣ ವಿವರಗಳನ್ನು ಅನುಸರಿಸಬೇಕು ಮತ್ತು ದೇವರು ಈ ಎಲ್ಲಾ ವಿಷಯಗಳನ್ನು ಇಸ್ರಾಯೇಲ್ ಜನರು ಅನುಸರಿಸುವುದನ್ನು ಕುರಿತು ಬಹಳ ನಿರ್ಧಿಷ್ಟವಾಗಿದ್ದು ಇಸ್ರಾಯೇಲ್ ಜನರು ಈ "ಮಾದರಿ"ಯನ್ನು


ಚಾಚು ತಪ್ಪದೆ ಪಾಲಿಸಬೇಕಾಗಿತ್ತು!
ಆತನ ವಾಕ್ಯಗಳನ್ನು ಮತ್ತೆ ಸ್ಪಷ್ಟವಾಗಿ ಗಮನಿಸೋಣ –

**ವಿಮೋಚನಕಾಂಡ 25:40 – "ಬೆಟ್ಟದಲ್ಲಿ ನಾನು ನಿನಗೆ ತೋರಿಸಿದ ಮಾದರಿಯ ಪ್ರಕಾರವೇ ಮಾಡಿಸಬೇಕು, ನೋಡು."**

ನಿಜಾಂಶವೇನೆಂದರೆ, ಈ ಗುಡಾರ ಕಟ್ಟಿಸುವ ಅತಿ ತೊಡಕಿನ ವಿವರಗಳು ಮತ್ತು ಅದರ ಉಪಕರಣಗಳು, ಹೊದಿಕೆಗಳು, ಪರದೆಗಳು, ಗೋಡೆಗಳು, ಬಲಿಪೀಠಗಳು, ಮತ್ತು ಲೋಹದ ಕೆತ್ತನೆಯ ಕೆಲಸಗಳು ಇತರೆ, ಎಲ್ಲವನ್ನು......
ವಿಮೋಚನಕಾಂಡ 25 ರಿಂದ 40ನೇ ಅಧಿಕಾರಗಳವರೆಗೂ ವಿವರವಾಗಿ ಕೊಡಲಾಗಿದೆ.

ಆದ್ದರಿಂದ ಮೋಶೆಯು ಇಸ್ರಾಯೇಲಿನ ಜನರಿಗೆ ಈ ಎಲ್ಲಾ ವಿಷಯವನ್ನು ಆದೇಶಿಸಿದನು ಮತ್ತು ಕೊನೆಯದಾಗಿ
ಗುಡಾರವು ನಿರ್ಮಿಸಲ್ಪಟ್ಟು ಸಿದ್ಧವಾಯಿತೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –


**ವಿಮೋಚನಕಾಂಡ 39:43**
**"ಅವರು ಮಾಡಿದ್ದ ಕೆಲಸವನ್ನು ಮೋಶೆ ಪರೀಕ್ಷಿಸಲಾಗಿ ಯೆಹೋವನ ಅಪ್ಪಣೆಯಂತೆಯೇ ಅವರು ಎಲ್ಲವನ್ನು ಮಾಡಿ ಮುಗಿಸಿದರೆಂದು ತಿಳುಕೊಂಡು ಅವರನ್ನು ಆಶೀರ್ವದಿಸಿದನು."**



ಈಗ ಈ ದೇವದರ್ಶನದ ಗುಡಾರವು ಇಸ್ರಾಯೇಲ್ಯರ ಎಲ್ಲಾ ಗೋತ್ರಗಳ ಮಧ್ಯದಲ್ಲಿ ಸ್ಥಾಪಿಸಲ್ಪಡಬೇಕೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಅರಣ್ಯಕಾಂಡ 2:2**

**".....ಇಸ್ರಾಯೇಲ್ಯರೆಲ್ಲರೂ ದೇವದರ್ಶನದ ಗುಡಾರದ ಸುತ್ತಲು ಸ್ವಲ್ಪ ದೂರವಾಗಿ ತಮ್ಮ ಡೇರೆಗಳನ್ನು ಹಾಕಿಕೊಳ್ಳಬೇಕು...."**




ಹೌದು! ಇಸ್ರಾಯೇಲ್ಯರು ಮತ್ತು ಹನ್ನೆರಡು ಗೋತ್ರದವರು ತಮ್ಮ ಡೇರೆಗಳನ್ನು ನಾಲ್ಕು ದಿಕ್ಕುಗಳಲ್ಲಿ ಹಾಕಿಕೊಳ್ಳಬೇಕು – ಉತ್ತರ/ದಕ್ಷಿಣ/ಪೂರ್ವ/ಪಶ್ಚಿಮ.

**ದೇವದರ್ಶನದ ಗುಡಾರವು ಅವರ ಮಧ್ಯದಲ್ಲಿರಬೇಕು!**

**ಈಗ ಗುಡಾರದ ಅರ್ಥವೇನು ಅಥವಾ ಇದು ಏನ್ನನ್ನು ಸೂಚಿಸುತ್ತದೆ?**

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಇಬ್ರಿಯರಿಗೆ 8:5**

**"ಅವರು ಪರಲೋಕದಲ್ಲಿರುವ ದೇವಾಲಯದ ಪ್ರತಿರೂಪವೂ ಛಾಯೆಯೂ ಆಗಿರುವ**

ಆಲಯದಲ್ಲಿ ಯಾಜಕತ್ವವನ್ನು ನಡೆಸುವವರು."


ಹೌದು! ದೇವರು ಕೊಟ್ಟಿರುವ ಈ ಗುಡಾರವು "ಪರಲೋಕದಲ್ಲಿರುವ" ದೇವಾಲಯದ "ಪ್ರತಿರೂಪವೂ" ಅಥವ.....

"ಪರಲೋಕದ" ಛಾಯೆಯಾಗಿದೆ ಎಂದು ನೋಡುತ್ತೇವೆ.

ಈಗ ಎಲ್ಲದಕ್ಕಿಂತ ಮೊದಲು ಈ ಗುಡಾರದ ವಿವಿಧ ಭಾಗಗಳನ್ನು ಕುರಿತು ಅಭ್ಯಾಸ ಮಾಡೋಣ ಮತ್ತು ಇವುಗಳು "ಪರಲೋಕ ವಿಷಯ"ದ ಕುರಿತು ಏನ್ನನ್ನು ಸೂಚಿಸುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ಓದೋಣ –

## ವಿಮೋಚನಕಾಂಡ 27:9-19

"ಗುಡಾರಕ್ಕೆ ಅಂಗಳವನ್ನು ಏರ್ಪಡಿಸಬೇಕು. ಆ ಅಂಗಳದ ತೆಂಕಣ ಕಡೆಯಲ್ಲಿ ತೆರೆಗಳು ಇರಬೇಕು. ಆ ತೆರೆಗಳು ಹುರಿನಾರಿನಬಟ್ಟೆಯಿಂದ ಉಂಟಾಗಿ ನೂರು ಮೊಳ ಉದ್ದವಾಗಿರಬೇಕು. ಆ ಕಡೆಯಲ್ಲಿ ಇಪ್ಪತ್ತು ಕಂಬಗಳೂ ಅವುಗಳಿಗೆ ಇಪ್ಪತ್ತು ತಾಮ್ರದ ಗದ್ದಿಗೇಕಲ್ಲುಗಳೂ ಇರಬೇಕು. ಕಂಬಗಳಿಗೆ ಬೆಳ್ಳಿಯ ಕೊಂಡಿಗಳೂ ಕಟ್ಟುಗಳೂ ಇರಬೇಕು. ಅದೇ ರೀತಿಯಾಗಿ ಉತ್ತರ
ಕಡೆಯಲ್ಲಿಯೂ ನೂರು ಮೊಳ ಉದ್ದವಾದ ತೆರೆಗಳೂ ಇಪ್ಪತ್ತು ಕಂಬುಗಳೂ ಇಪ್ಪತ್ತು ತಾಮ್ರದ ಗದ್ದಿಗೇಕಲ್ಲುಗಳೂ ಇರಬೇಕು.  ಕಂಬಗಳ ಕೋಡಿಗಳೂ ಕಟ್ಟುಗಳೂ ಬೆಳ್ಳಿಯವಾಗಿರಬೇಕು. ಪಶ್ಚಿಮ ಕಡೆಯಲ್ಲಿ ಅಂಗಳದ ಅಗಲಕ್ಕೆ ಐವತ್ತು ಮೊಳ ಉದ್ದವಾದ
ತೆರೆಗಳೂ ಹತ್ತು ಕಂಬಗಳೂ ಹತ್ತು ಗದ್ದಿಗೇಕಲ್ಲುಗಳೂ ಇರಬೇಕು. ಪೂರ್ವದಿಕ್ಕಿನಲ್ಲಿಯೂ ಅಂಗಳದ ಅಗಲವು ಐವತ್ತು ಮೊಳವಿರಬೇಕು. ಅಲ್ಲಿ ಬಾಗಲಿನ ಎರಡು ಕಡೆಗಳಲ್ಲಿಯೂ ಹದಿನೈದು ಮೊಳ ಉದ್ದವಾದ ತೆರೆಗಳೂ ಅವುಗಳಿಗೆ ಮೂರು ಮೂರು
ಕಂಬಗಳೂ ಮೂರು ಮೂರು ಗದ್ದಿಗೇಕಲ್ಲುಗಳೂ ಇರಬೇಕು. ಅಂಗಳದ ಬಾಗಲಲ್ಲೇ ಇಪ್ಪತ್ತು ಮೊಳದ ಪರದೆಯು ಇರಬೇಕು. ಅದನ್ನು ಹುರಿನಾರಿನ ಬಟ್ಟೆಯಲ್ಲಿ ನೀಲಿ ಧೂಮ್ರ ರಕ್ತವರ್ಣಗಳುಳ್ಳ ದಾರದಿಂದ ಬುಟೇದಾರೀ ಕೆಲಸದವರ ಕೈಯಿಂದ ಮಾಡಿಸಬೇಕು. ಬಾಗಲಿಗೆ ನಾಲ್ಕು ಕಂಬಗಳೂ ನಾಲ್ಕು ಗದ್ದಿಗೇಕಲ್ಲುಗಳೂ ಇರಬೇಕು. ಅಂಗಳದ ಸುತ್ತಲಿರುವ ಎಲ್ಲಾ ಕಂಬಗಳಿಗೂ ಬೆಳ್ಳಿಯ ಕಟ್ಟುಗಳೂ ಬೆಳ್ಳಿಯ ಕೊಂಡಿಗಳೂ ತಾಮ್ರದ ಗದ್ದಿಗೇಕಲ್ಲುಗಳೂ ಇರಬೇಕು. ಅಂಗಳವು ನೂರು ಮೊಳ ಉದ್ದವಾಗಿಯೂ ಐವತ್ತು ಮೊಳ ಅಗಲವಾಗಿಯೂ ಇರಬೇಕು. ಅದರ ಸುತ್ತಲಿರುವ ಪರದೆಯು ಹುರಿನಾರಿನ ಬಟ್ಟೆಯಿಂದುಂಟಾಗಿ ಐದು ಮೊಳ ಎತ್ತರವಿರಬೇಕು. ಅದಕ್ಕೆ ಸೇರಿದ ಗದ್ದಿಗೇಕಲ್ಲುಗಳು ತಾಮ್ರದವುಗಳಾಗಿರಬೇಕು. ಗುಡಾರದ ಸಕಲವಿಧವಾದ ಕೆಲಸಕ್ಕೆ ಬೇಕಾದ ಉಪಕರಣಗಳೂ ಗುಡಾರದ ಗೂಟಗಳೂ ಅಂಗಳದ ಗೂಟಗಳೂ ತಾಮ್ರದವುಗಳಾಗಿರಬೇಕು."




ಹೌದು! ಈ ಹೊರಗಿನ ಗೋಡೆಯ ಅಥವಾ ಅಂಗಳದ ತೆರೆಯನ್ನು ಕುರಿತು ವರ್ಣಿಸಿರುವದು ಅತ್ಯಂತ ವಿವರವುಳ್ಳದಾಗಿತ್ತು, ಮತ್ತು ಅತಿ ತೊಡಕಿನದಾಗಿತ್ತು!!

ಆ ಹೊರಗಿನ ಗೋಡೆ ಅಥವಾ.... "ತೆರೆಗಳು"
ಕಂಬಗಳ ಮಧ್ಯದಲ್ಲಿರಬೇಕು ಮತ್ತು ಪ್ರತಿ 5 ಮೊಳದ
ತೆರೆಗಳ ಮಧ್ಯೆ ಎರಡು ಕಂಬಗಳಿರಬೇಕು.

ಆದ್ದರಿಂದ ಪ್ರತಿ ಉತ್ತರ ಮತ್ತು ದಕ್ಷಿಣ ಕಡೆಗಳಲ್ಲಿನ ಗುಡಾರದಲ್ಲಿ ಇಪ್ಪತ್ತು ಕಂಬಗಳು ಮತ್ತುಪ್ರತಿ ಪೂರ್ವ ಮತ್ತು ಪಶ್ಚಿಮ ಕಡೆಗಳಲ್ಲಿನ ಗುಡಾರದಲ್ಲಿ ಹತ್ತು ಕಂಬಗಳು ಇದ್ದು, ಒಟ್ಟು ಅರವತ್ತು( 60) ಕಂಬಗಳಿದ್ದವು.

ಆದ್ದರಿಂದ ಗುಡಾರದ ಅಳತೆಯ ವಿವರ ಹೀಗಿದೆ –


**ಉತ್ತರ** ➡ 100 ಮೊಳಗಳು (150 ಅಡಿ)

**ದಕ್ಷಿಣ** ➡ 100 ಮೊಳಗಳು (150 ಅಡಿ)

**ಪಶ್ಚಿಮ** ➡ 50 ಮೊಳಗಳು (75 ಅಡಿ)

**ಪೂರ್ವ** ➡ 50 ಮೊಳಗಳು (75 ಅಡಿ)

ಈಗ ಈ ಪರಿಶುದ್ಧವಾದ ಬಿಳಿಯ **"ಹುರಿ ನಾರಿನ ಬಟ್ಟೆ"**ಯ ಗೋಡೆಯು
5 ಮೊಳ ಎತ್ತರದಲ್ಲಿದೆ (ವಾಕ್ಯ 18) ಅಥವಾ 7½ ಅಡಿ ಎತ್ತರದಲ್ಲಿದೆ!



**ಯಾವ ಮನುಷ್ಯನು ಸಹ ನೋಡಲಾಗದ ಎತ್ತರದಲ್ಲಿದೆ!**

ಮತ್ತು ಈ ಗುಡಾರದ ಬಾಗಿಲು (Gate) ಪೂರ್ವ ದಿಕ್ಕಿನಲ್ಲಿ ಮಾತ್ರವಿದೆ ಮತ್ತು

ಅದರ ಅಗಲವು **20** ಮೊಳವಿದೆ ಅಥವಾ **5** ಕಂಬಗಳ ನಡುವೆ ಇದೆ.

ಇದರ ಮೊತ್ತ **30** ಅಡಿ ಅಗಲವಿರುತ್ತದೆ.

ಈ ಬಾಗಿಲು "**ಹುರಿ ನಾರಿನ ಬಟ್ಟೆ**"ಯದಾಗಿರುತ್ತದೆ.... ಮತ್ತು ಇದು


......ನೀಲಿ, ಧೂಮ್ರ ಮತ್ತು ರಕ್ತವರ್ಣಗಳುಳ್ಳ ದಾರದಿಂದ ಬುಟೇದಾರಿ ಕೆಲಸದವರ ಕೈಯಿಂದ ಮಾಡಿಸಿರುತ್ತದೆ.



ಈಗ ಈ ಸುಂದರವಾದ ಬಾಗಿಲು ಗುಡಾರಕ್ಕೆ ಹೋಗುವದಕ್ಕೆ ಒಂದೇ ದಾರಿಯಾಗಿರುತ್ತದೆ.

ಯಾರಾದರು ಈ ಗೋಡೆಯ ಹೊರಗಡೆ ನಿಂತು ನೋಡಿದರೆ ಈ ಎತ್ತರವಾದ ಗೋಡೆಗಳು ಬಿಟ್ಟು ಮತ್ತೇನು ಕಾಣುವುದಿಲ್ಲ!!

**ಇದು ಗುಡಾರದ ಹೊರಗಿನ ವಿಷಯದ ಕಥೆಯಾಗಿದೆ!**



**ಇವೆಲ್ಲವೂ ಏನ್ನನ್ನು ಸೂಚಿಸುತ್ತದೆ?**

ನಾವು ಮೊದಲೇ **ಇಬ್ರಿಯ 8:5**ರಲ್ಲಿ ನೋಡಿದ್ದೇನೆಂದರೆ ದೇವದರ್ಶನ ಗುಡಾರವು **"ಪರಲೋಕ ವಿಷಯದ"** ಅಥವಾ **ಉನ್ನತ ಆತ್ಮೀಕ ವಿಷಯಗಳ** "**ನೆರಳಾಗಿದೆ**".


ಈಗ ನಾವು ಈ ವಿಷಯಗಳು ಏನ್ನನ್ನು ಸೂಚಿಸುತ್ತವೆ ಎಂದು ಮೊದಲು ಗುಡಾರವನ್ನೇ ಕುರಿತು ಅಭ್ಯಾಸ ಮಾಡೋಣ, ಮತ್ತು ಇದರ ನಂತರ ಈ ವಿಷಯಗಳ ಆತ್ಮೀಕ ಅರ್ಥಗಳನ್ನು ಕುರಿತು ನೋಡೋಣ!

ಇಸ್ರಾಯೇಲ್ಯರು ಗುಡಾರದಿಂದ ಸ್ವಲ್ಪ ದೂರ ತಮ್ಮ **ಡೇರೆಗಳನ್ನು** ಎಲ್ಲಾ ನಾಲ್ಕು ಕಡೆಗಳಲ್ಲಿ ಹಾಕಿರುವದು........

**ಈ ಲೋಕದ ಎಲ್ಲಾ ಮನುಷ್ಯ ಜಾತಿಯನ್ನು ಸೂಚಿಸುತ್ತದೆ.**

ಉತ್ತರ/ದಕ್ಷಿಣ/ಪೂರ್ವ ಮತ್ತು ಪಶ್ಚಿಮದಲ್ಲಿರುವ ಲೋಕದ ಎಲ್ಲಾ ಮನುಷ್ಯರು ದೇವರ **ಜ್ಞಾನವಿಲ್ಲದೆ** ಇದ್ದಾರೆ.

ಇಸ್ರಾಯೇಲ್ಯರಿಗೆ **ಎತ್ತರದ** (7½ ಅಡಿ) ಗೋಡೆಯು ಅಪನಂಬಿಕೆ ಎಂಬ ತಡೆಯನ್ನು ಸೂಚಿಸುತ್ತದೆ ಮತ್ತು ಇನ್ನೂ ಏನನ್ನು ಸೂಚಿಸುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –




**1 ಕೊರಿಂಥದವರಿಗೆ 2:14**


**"ಪ್ರಾಕೃತ ಮನುಷ್ಯನು ದೇವರಾತ್ಮನ ವಿಷಯಗಳನ್ನು ಬೇಡವೆನ್ನುತ್ತಾನೆ; ಅವು ಅವನಿಗೆ ಹುಚ್ಚು ಮಾತಾಗಿ ತೋರುತ್ತವೆ; ಅವು ಆತ್ಮ ವಿಚಾರದಿಂದ ತಿಳಿಯ ತಕ್ಕವುಗಳಾಗಿರಲಾಗಿ ಅವನು ಅವುಗಳನ್ನು ಗ್ರಹಿಸಲಾರನು."**

ಹೌದು! ಈ ಲೋಕದ ಮನುಷ್ಯನು ("**ಪ್ರಾಕೃತ ಮನುಷ್ಯನು**") ದೇವರ ಆತ್ಮವನ್ನು ಹೊಂದುವವರೆಗು ದೇವರ ಆತ್ಮೀಕ ವಿಷಯಗಳನ್ನು ತಿಳಿದುಕೊಳ್ಳಲಾರನು, ಏಕೆಂದರೆ ಇದುವರೆಗು ದೇವರಾತ್ಮವು "**ಎಲ್ಲಾ ಮನುಷ್ಯರ ಮೇಲೆ ಸುರಿಸಲ್ಪಡಲಿಲ್ಲ**".

ಆದ್ದರಿಂದ ಈ ಲೋಕದವರು ......ಅಪನಂಬಿಕೆಯ ಸ್ಥಿತಿಯಲ್ಲಿದ್ದಾರೆ ಮತ್ತು ದೇವರ ವಿಷಯದಲ್ಲಿ ಕುರುಡರಾಗಿದ್ದು ಡೇರೆಗಳಲ್ಲಿಯೇ ಉಳಿದಿದ್ದಾರೆ.

ಈಗ ಒಬ್ಬ ವ್ಯಕ್ತಿಯು ಗುಡಾರದೊಳಗೆ ಪ್ರವೇಶಿಸ ಬೇಕಾದರೆ ಆತನು ಅಥವಾ ಆಕೆಯು ಪೂರ್ವ ದಿಕ್ಕಿನಲ್ಲಿರುವ ಬಾಗಿಲಕಡೆಗೆ ಬರಬೇಕಾಗಿದೆ.

## ಅದು ಏನನ್ನು ಸೂಚಿಸುತ್ತದೆ ?





ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ –

**ಯೋಹಾನ 10:9/ 14:6**

**"ನಾನೇ ಆ ಬಾಗಿಲು ನನ್ನ ಮುಖಾಂತರವಾಗಿ ಯಾವನಾದರೂ ಒಳಗೆ ಹೋದರೆ ಸುರಕ್ಷಿತನಾಗಿದ್ದು....."**

**"ಯೇಸು ಅವನಿಗೆ – ನಾನೇ ಮಾರ್ಗವೂ......"**

ಹೌದು! ಗುಡಾರಕ್ಕೆ ಪ್ರವೇಶಿಸಲು ಇರುವ ಆ "ಬಾಗಿಲು" ಅಥವಾ "ಮಾರ್ಗ" .....ಯೇಸುವನ್ನು ಸೂಚಿಸುತ್ತದೆ, ಏಕೆಂದರೆ ಯಾವ ಮನುಷ್ಯನಾದರು ಸರಿ ದೇವರ ವಿಷಯದಲ್ಲಿ **"ಪ್ರವೇಶಿಸ – ಬೇಕಾದರೆ"** ಆತನಲ್ಲಿ ನಂಬಿಕೆ ಇಡುವುದರಿಂದ ಮಾತ್ರ ಸಾಧ್ಯವಾಗುತ್ತದೆ!

ಆದ್ದರಿಂದಲೇ ಯೇಸು ಹೀಗೆಂದನು – **ಯೋಹಾನ 14:6**


**".....ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವುದಿಲ್ಲ."**

ಹೌದು! ಆದ್ದರಿಂದ, ದೇವರೊಂದಿಗೆ ಮತ್ತೆ ಸಂಧಾನ ಮಾಡಿಕೊಳ್ಳಲು ಯೇಸುವಿನ ಮೇಲೆ ನಂಬಿಕೆಯಿಡುವುದೊಂದೇ ದಾರಿ.

ಈಗ, ನಮ್ಮ ಕರ್ತನಾದ ಯೇಸು ಕ್ರಿಸ್ತನನ್ನು ಸೂಚಿಸುವ ಆ "ಬಾಗಿಲಿನ" ಮೂಲಕ ನಾವು ಕಲಿಯಬೇಕಾದ ಕೆಲವು ಆತ್ಮೀಕ ಪಾಠಗಳಿವೆ.

**"ತೆರೆಯ"** ವಿಷಯಗಳ ಬಟ್ಟೆಯು ಕ್ರಿಸ್ತನ ಪರಿಶುದ್ಧತ್ವ ಮತ್ತು ನೀತಿಯನ್ನು ಸೂಚಿಸುತ್ತದೆ. ಒಬ್ಬ ವ್ಯಕ್ತಿಯು ಆ ಬಿಳಿ ತೆರೆ ಗೋಡೆಯ **"ಒಳಗೆ"** ಪ್ರವೇಶಿಸುವಾಗ ಹೇಗೆ ಒಬ್ಬ ಪಾಪಿಯು ತಾನು ಯೇಸುವಿನ ಮೇಲೆ ನಂಬಿಕೆಯಿಡುವಾಗ ತನ್ನ ಪಾಪಗಳಿಗೆ ಹೇಗೆ **"ಹೊದಿಕೆ"**ಯನ್ನು ಹೊಂದುತ್ತಾನೆಂದು ಸೂಚಿಸುತ್ತದೆ ಅಥವಾ ತನ್ನ ಪಾಪಗಳಿಂದ ನಿರ್ದೋಷ ಪಡಿಸಿಕೊಳ್ಳುತ್ತಾನೆಂದು ಸೂಚಿಸುತ್ತದೆ.

ಇದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –



**ಅಪೊಸ್ತಲರ ಕೃತ್ಯಗಳು 10:43**


**"ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪಪರಿಹಾರವನ್ನು ಹೊಂದುವನೆಂದು ಆತನ ವಿಷಯದಲ್ಲಿ ಪ್ರವಾದಿಗಳೆಲ್ಲರು ಸಾಕ್ಷಿ ಹೇಳಿದ್ದಾರೆ,** ಅಂದನು."

**ಹೌದು! ಯೇಸುವಿನ ಮೇಲೆ ನಂಬಿಕೆಯಿಡುವುದರ ಮೂಲಕ ಒಬ್ಬ ಪಾಪಿಯು "ಬಿಳಿ ತೆರೆಗಳ" ಹೊದಿಕೆಯನ್ನು ಹೊಂದುತ್ತಾನೆ.**

ಈಗ ಒಬ್ಬ ವ್ಯಕ್ತಿಯು ಆ "ಬಾಗಿಲು" ಒಳಗೆ ಪ್ರವೇಶಿಸಿದಾಗ ಆತನು ನಾಲ್ಕು ಭಾಗಗಳುಳ್ಳ ಪ್ರತಿ 5 ಮೊಳದ "ಬುಟೇದಾರಿ" ಕೆಲಸದವರ ಕೈಯಿಂದ ಮಾಡಿಸಿದ ಪರದೆಯನ್ನು ಗಮನಿಸುವನು.

ಅದು ಯೇಸುವನ್ನು ಯಾರಿಗಾದರು **ಪರಿಚಯಿಸಬೇಕಾದರೆ** ಈ **ನಾಲ್ಕು ಸುವಾರ್ತೆಗಳಾದ .......ಮತ್ತಾಯ/ ಮಾರ್ಕ/ ಲೂಕ/ ಯೋಹಾನ** ಪುಸ್ತಕಗಳಿಂದಲೇ ಸಾಧ್ಯ ಏಕೆಂದರೆ ಈ ಪುಸ್ತಕಗಳು ಯೇಸು ಮತ್ತು ಆತನ ಜೀವನ ಮತ್ತು ಮರಣದ ವಿಷಯ ದಾಖಾಲಾಗಿರುವದನ್ನು ಒಳಗೊಂಡಿದೆ.

ಈಗ, ಪ್ರತೀ 5 ಮೊಳದ ನಾಲ್ಕು ಭಾಗದ "ಹಿಡಿತಕ್ಕೆ" ಅವಶ್ಯವಿರುವ ಆ "ಅಧಿಕ" ಕಂಬಗಳು ಏನ್ನನ್ನು ಸೂಚಿಸುತ್ತದೆ ಎಂದರೆ ನಾಲ್ಕು ಸುವಾರ್ತೆಯ ಸೇವಕರ ಸಾಕ್ಷಿಗಳ



ಜೊತೆಗೆ ಇನ್ನೊಬ್ಬನು ಇದಕ್ಕಿಂತಲೂ ಅಧಿಕವಾದ ಸಾಕ್ಷಿಯು ಯೇಸುವನ್ನು ಕುರಿತು ನೀಡುತ್ತಾನೆ.... ಆತನೇ ಅಪ್ಪೋಸ್ತಲನಾದ ಪೌಲನು, ಹೊಸ ಒಡಂಬಡಿಕೆಯ **1/3** ಭಾಗದಷ್ಟು ಒಳಗೊಂಡಿರುವ **14** ಪತ್ರಿಕೆಗಳಿವೆ!!

ಹೌದು! ಅಪ್ಪೋಸ್ತಲನಾದ ಪೌಲನೂ ಸಹ ನಮ್ಮ ಕರ್ತನಾದ ಯೇಸು ಕ್ರಿಸ್ತನಿಗೆ ಸಾಕ್ಷಿಕೊಡುವದರಲ್ಲಿ "ಎತ್ತಿ ಹಿಡಿ"ಯುವವನಾಗಿದ್ದಾನೆ!

ಕೊನೆಯದಾಗಿ, "ಬಾಗಿಲಿನ" ಮೇಲಿರುವ ನೂಲಿನ ಬಣ್ಣಗಳು ಕರ್ತನಾದ ಯೇಸುವಿನ ಗುಣಲಕ್ಷಣಗಳನ್ನು ಸೂಚಿಸುತ್ತದೆ –

**ರಕ್ತವರ್ಣ**

– ಇದು ಶಿಲುಬೆಯಲ್ಲಿ ತಾನು ಸುರಿಸಿದ ಈಡು ಬಲಿಯ ರಕ್ತದ ಮೂಲಕ ಆತನು......ಈ ಲೋಕದ ರಕ್ಷಕನಾದನು ಎಂದು ಸೂಚಿಸುತ್ತದೆ.

**ನೀಲಿ**

ಇದು ಆಕಾಶ ಮತ್ತು ಅದರ ನೀಲಿ ಬಣ್ಣವು ದೇವರಿಗೆ ನಂಬಿಗಸ್ತಿಕೆಯಾಗಿರುವುದನ್ನು ಸೂಚಿಸುತ್ತದೆ. ಅದೇ ರೀತಿ, ಯೇಸು ಸಹ ದೇವರ ನಂಬಿಗಸ್ತ ಮಗನಾಗಿದ್ದಾನೆ.

**ಧೂಮ್ರ**

ಇದು ರಾಜ ಮನೆತನದ ಅಥವಾ ದೊರೆತನವನ್ನು ಸೂಚಿಸುತ್ತದೆ ಮತ್ತು ಈಗ ಯೇಸು "ರಾಜಾಧಿ ರಾಜನೂ ಮತ್ತು ಕರ್ತಾಧಿಕರ್ತನೂ" ಆಗಿದ್ದಾನೆ.

ಇಲ್ಲಿ ಗಮನಿಸ ಬೇಕಾದ ಇನ್ನೊಂದು ವಿಷಯವೇನೆಂದರೆ ಧೂಮ್ರವು ರಕ್ತವರ್ಣ ಮತ್ತು ನೀಲಿಯ ಮಿಶ್ರಣದಿಂದ ದೊರಕುತ್ತದೆ!

ಹಾಗೆಯೆ....... ಪರಲೋಕದ ತಂದೆಯ ಚಿತ್ತಕನುಸಾರವಾಗಿ ಯೇಸು ಕ್ರಿಸ್ತನು ನಂಬಿಗಸ್ತಿಕನಾಗಿದ್ದು ತನ್ನ ಜೀವವನ್ನು ಶಿಲುಬೆಯಲ್ಲಿ ಕೊಡುವುದರ ಮೂಲಕ ಈ ಇಡೀ ಲೋಕದ ರಕ್ಷಕನಾಗುವುದರ ಮುಖಾಂತರ ಅತ್ಯುನ್ನತ ಸ್ಥಾನವನ್ನು ತಂದೆಯಿಂದ ಪಡೆದುಕೊಂಡನು!!


**ಆದ್ದರಿಂದ ಇದು ಗುಡಾರದ ಹೊರಗಿನ ಕಥೆಯ ಆತ್ಮೀಕ ಸೂಚನೆಯಾಗಿದೆ!**

ಈಗ ಗುಡಾರದ "ಬಾಗಿಲ" ಒಳಗೆ ಪ್ರವೇಶಿಸೋಣ....

ಗುಡಾರದ ಒಳಗೆ ಪ್ರವೇಶಿಸಿದಂತೆಯೇ ಒಬ್ಬ ವ್ಯಕ್ತಿಯು ಏನನ್ನು ನೋಡುತ್ತಾನೆ ಎಂಬುದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ವಿಮೋಚನಕಾಂಡ 40:29**


**"ಯೆಹೋವನು ಆಜ್ಞಾಪಿಸಿದಂತೆಯೇ ದೇವದರ್ಶನದ ಗುಡಾರದ ಬಾಗಿಲಿನ ಮುಂದೆ ಯಜ್ಞವೇದಿಯನ್ನು ಇಟ್ಟು ಅದರ ಮೇಲೆ ಸರ್ವಾಂಗ ಹೋಮವನ್ನೂ ಧಾನ್ಯ ಸಮರ್ಪಣೆಯನ್ನೂ ಮಾಡಿದನು."**



## ಯಜ್ಞವೇದಿ

(ಇದನ್ನು ಕುರಿತು ವಿವರವಾಗಿ ವಿಮೋಚನಕಾಂಡ 27:1-8ರಲ್ಲಿಯೂ ಸಹ ದಾಖಲಾಗಿದೆ)

ಹೌದು! "ಬಾಗಿಲ" ಒಳಗೆ ಪ್ರವೇಶಿಸಿದಂತೆಯೇ "ಯಜ್ಞವೇದಿ"ಯನ್ನು ಕಾಣಬಹುದು.



ಈ ವೇದಿಯು ಮರದಿಂದ ಮಾಡಿಸಿ ತಾಮ್ರದಿಂದ ಹೊದಿಸಲಾಗಿದೆ.

ಇದರ ಅಗಲ ಮತ್ತು ಉದ್ದ 7 ½ ಅಡಿಗಳಾಗಿದ್ದು, ಎತ್ತರವು 4 ½ ಅಡಿಗಳಾಗಿವೆ.

**ಹೌದು! ಅದೊಂದು ದೊಡ್ಡ ಯಜ್ಞವೇದಿಯಾಗಿದೆ!**

## ಇದು ಏನನ್ನು ಸೂಚಿಸುತ್ತದೆ?

"ಬಾಗಿಲ" ಒಳಗೆ ಪ್ರವೇಶಿಸಿ ದೇವದರ್ಶನ ಗುಡಾರದ ಬಳಿ ಬಂದೊಡನೆ
ಮೊದಮೊದಲು
ಒಬ್ಬ ವ್ಯಕ್ತಿಗೆ ಗಮನ ಸೆಳೆಯುವುದೇನೆಂದರೆ ಈ ದೊಡ್ಡ ಯಜ್ಞವೇದಿ
ಅದೇ ರೀತಿ ಆತ್ಮೀಕವಾಗಿ ಮಾತನಾಡುವುದಾದರೆ, ಒಬ್ಬ ವಿಶ್ವಾಸಿಯು ಕರ್ತನಾದ
ಯೇಸುವಿನ ಮೇಲೆ
ನಂಬಿಕೆಯಿಟ್ಟ ಮೇಲೆ ಮೊದಮೊದಲು ಆತನಿಗೆ ಗಮನ ಸೆಳೆಯುವುದೇನೆಂದರೆ
ಕಲ್ವಾರಿ ಶಿಲುಬೆಯಲ್ಲಿ ಯೇಸುವಿನ "ಅದ್ಭುತವಾದ ಬಲಿದಾನ"!


ಹೌದು! ಈ ಯಜ್ಞವೇದಿಯು ಕಲ್ವಾರಿ ಶಿಲುಬೆಯಲ್ಲಿ "ಮನುಷ್ಯನಾದ ಯೇಸು
ಕ್ರಿಸ್ತನು" ಮಾಡಿದ
"ಬಲಿದಾನ"ವನ್ನು ಸೂಚಿಸುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**1 ತಿಮೊಥೆಯನಿಗೆ 2:5,6**

**"ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ; ಆತನು
ಮನುಷ್ಯನಾಗಿರುವ ಕ್ರಿಸ್ತ ಯೇಸುವೇ;
ಆತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಕೊಟ್ಟನು."**

ಹೌದು! ಇಲ್ಲಿ ಸ್ಪಷ್ಟವಾಗಿ ತಿಳಿಯುವುದೇನೆಂದರೆ ಯೇಸು ಕ್ರಿಸ್ತನು ಕಲ್ವಾರಿ
ಶಿಲುಬೆಯಲ್ಲಿ ತನ್ನ ಜೀವವನ್ನು
ಕೊಟ್ಟದು ಈ ಲೋಕದ ರಕ್ಷಣೆಗಾಗಿಯೆ.....
ಆದರೆ, ಒಂದು ಹೊಸ ನಂಬಿಗಸ್ತನಿಗೆ ಈ ಒಂದು ಹಂತದಲ್ಲಿ ಈಡು ಬಲಿಯ
ಉಪದೇಶವನ್ನು ಮತ್ತು "ಸರಿ ಸಮನಾದ
ಕ್ರಯ"ದ ಬಗ್ಗೆ ಆಳವಾಗಿ ತಿಳಿದಿರಲು ಸಾದ್ಯವಿಲ್ಲ.

ಯಜ್ಞವೇದಿಯನ್ನು ದಾಟಿದ ನಂತರ, ಗುಡಾರದ ಕಡೆಗೆ ಹೋಗುವಾಗ
ಒಬ್ಬ ವ್ಯಕ್ತಿಗೆ ಕಾಣುವದು ಏನೆಂದರೆ –



# ಗಂಗಾಳ

ಈ "ಗಂಗಾಳ"ವನ್ನು ಕುರಿತು ವಿವರವಾಗಿ ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ವಿಮೋಚನಕಾಂಡ 30:17-21 / 40:30-32**

"ಯೆಹೋವನು ಮೋಶೆಗೆ ಮತ್ತೂ ಹೇಳಿದ್ದೇನಂದರೆ – ಸ್ನಾನಕ್ಕೋಸ್ಕರ ಒಂದು ತಾಮ್ರದ ಗಂಗಾಳವನ್ನೂ ಅದಕ್ಕೆ ತಾಮ್ರದ ಪೀಠವನ್ನೂ ಮಾಡಿಸಿ ದೇವದರ್ಶನದ ಗುಡಾರಕ್ಕೂ ಯಜ್ಞವೇದಿಗೂ ನಡುವೆ ಇಟ್ಟು ಅದರಲ್ಲಿನೀರನ್ನು ತುಂಬಿಸಬೇಕು. ಆರೋನನೂ ಅವನ ಮಕ್ಕಳೂ ಅದರಿಂದ ಕೈಕಾಲುಗಳನ್ನು ತೊಳೆದುಕೊಳ್ಳಬೇಕು. ಅವರು ದೇವದರ್ಶನದ ಗುಡಾರದೊಳಗೆ ಹೋಗುವಾಗೆಲ್ಲಾ ಆ ನೀರಿನಿಂದ ಕೈಕಾಲುಗಳನ್ನು ತೊಳೆದುಕೊಂಡು ಹೋಗಬೇಕು; ತೊಳೆಯದೆ ಹೋದರೆ ಸತ್ತಾರು. ಹಾಗೆಯೇ ಅವರು ದೇವರ ಸೇವೆಯನ್ನು ನಡಿಸುವವರಾಗಿ ಯೆಹೋವನಿಗೆ ಹೋಮಸಮರ್ಪಣೆಗಾಗಿ ಯಜ್ಞವೇದಿಯ ಬಳಿಗೆ ಬರುವಾಗಲೂ ಕೈಕಾಲುಗಳನ್ನು ತೊಳೆದುಕೊಂಡು ಬರಬೇಕು; ತೊಳುಕೊಳ್ಳದೆ ಬಂದರೆ ಸತ್ತಾರು. ಇದು ಅವನಿಗೂ ಅವನ ಸಂತತಿಯವರಿಗೂ ಶಾಶ್ವತ ನಿಯಮ."

"ಯೆಹೋವನು ಆಜ್ಞಾಪಿಸಿದಂತೆ ಮೋಶೆ ದೇವದರ್ಶನದ ಗುಡಾರಕ್ಕೂ ಯಜ್ಞವೇದಿಗೂ ನಡುವೆ ಗಂಗಾಳವನ್ನು ಇರಿಸಿ ತೊಳಕೊಳ್ಳುವದಕ್ಕೋಸ್ಕರ ಅದರಲ್ಲಿ ನೀರು ತುಂಬಿಸಿದನು. ಅದರಲ್ಲಿ ಮೋಶೆಯೂ ಆರೋನನೂ ಅವನ ಮಕ್ಕಳೂ ದೇವದರ್ಶನದ ಗುಡಾರದೊಳಗೆ

**ಹೋಗುವಾಗಲೂ ಯಜ್ಞವೇದಿಯ**
**ಸೇವೆಗೆ ಬಂದಾಗಲೂ ಕೈಕಾಲುಗಳನ್ನು ತೊಳಕೊಳ್ಳುವರು."**

ಹೌದು! ಈ **ಗಂಗಾಳವು (ಬೇಸಿನ್(ಆಂಗ್ಲ)– ಎನ್.ಐ.ವಿ)** ಅಂಗಳದೊಳಗೆ ಯಜ್ಞವೇದಿ ಮತ್ತು ಗುಡಾರದ ಮಧ್ಯದಲ್ಲಿರಬೇಕು.

ಇದು "**ತಾಮ್ರ**"ದಿಂದ ("**ಕಂಚು**" – **ಎನ್.ಐ.ವಿ**) ಮಾಡಿದ್ದಾಗಿರಬೇಕು ಮತ್ತು ಯಾಜಕರು ಮತ್ತು ಲೇವಿಯರು ಅ ಗಂಗಾಳದಲ್ಲಿರುವ ನೀರಿನಲ್ಲಿ ತಮ್ಮ "ಕೈ ಮತ್ತು ಕಾಲು"ಗಳನ್ನು ತೊಳೆದುಕೊಳ್ಳಬೇಕು.

ಆರೋನನು (ಪ್ರಧಾನ ಯಾಜಕ) ಮತ್ತು ಆತನ ಮಕ್ಕಳು(ಯಾಜಕರು) ದೇವರಿಂದ ಆಜ್ಞೆಯನ್ನು ಹೊಂದಿದ್ದೇನೆಂದರೆ ಯಜ್ಞವೇದಿಯ ಮೇಲೆ ಅಥವಾ ಪರಿಶುದ್ಧ ಗುಡಾರದ ಯಾವುದೇ ಸೇವೆಯನ್ನು ಮಾಡುವ ಮೊದಲು ಅವರ "ಕೈ ಮತ್ತು ಕಾಲುಗಳನ್ನು" ತೊಳೆದುಕೊಳ್ಳಬೇಕು.

**ಒಂದು ವೇಳೆ ಅವರು ತೊಳೆಯದೆ ಸೇವೆ ಮಾಡಿದರೆ.......**
**ಅವರು ಸಾಯುತ್ತಾರೆ!**

**ಇವೆಲ್ಲವು ಏನನ್ನು ಸೂಚಿಸುತ್ತದೆ?**

ಈಗ ತಾನೆ ನಾವು ನೋಡಿದ ಹಾಗೆ ಯಜ್ಞವೇದಿಯು ಕಲ್ವಾರಿ ಶಿಲುಬೆಯಲ್ಲಿ ನಮ್ಮ ಕರ್ತನು ಮಾಡಿದ "ಮಹಾ ತ್ಯಾಗ"(ಬಲಿದಾನ)ವನ್ನು ಸೂಚಿಸುತ್ತದೆ.

ಈ ಮಹಾ ತ್ಯಾಗ (ಬಲಿದಾನ)ವನ್ನು ಕುರಿತು ಒಬ್ಬ "ವಿಶ್ವಾಸಿ"ಯು ತಿಳಿದು ಕೊಂಡ ಮೇಲೆ ಆತನು ಸತ್ಯವೇದದ ಸುವಾರ್ತಾ ಪುಸ್ತಕಗಳನ್ನು ಓದುವ ಮೂಲಕ ಯೇಸುವಿನ ಬಗ್ಗೆ ಇವೆಲ್ಲವನ್ನು ಕಂಡು ಕೊಳ್ಳುತ್ತಾನೆ.

ಆದ್ದರಿಂದ ಒಬ್ಬ "ವಿಶ್ವಾಸಿಯು" ಈಗ ದೇವರ ವಾಕ್ಯವಾದ ಸತ್ಯವೇದದ ಕುರಿತು ಪರಿಚಿತನಾಗುತ್ತಾನೆ!!

ಮತ್ತು ಆ "ಗಂಗಾಳ"ವು ಅದನ್ನೇ ಸೂಚಿಸುತ್ತದೆ!

ಸತ್ಯವೇದವನ್ನು ಮೊದಮೊದಲು ಅರ್ಥಮಾಡಿಕೊಳ್ಳುವಾಗ ಅದು ನೀರಿನಂತೆ ಒಬ್ಬ "ವಿಶ್ವಾಸಿ"ಯನ್ನು ಶುದ್ಧ ಮಾಡಲು ಆರಂಭಿಸುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

## ಎಫೆಸದವರಿಗೆ 5:26,27

**"....ಪರಿಶುದ್ಧವೂ ನಿರ್ದೋಷವೂ ಮಹಿಮೆಯುಳ್ಳದ್ದೂ ಆಗಿರುವ ಸಭೆಯನ್ನಾಗಿ ತನ್ನೆದುರಿನಲ್ಲಿ ನಿಲ್ಲಿಸಿಕೊಳ್ಳಬೇಕೆಂದು ವಾಕ್ಯೋಪದೇಶ ಸಹಿತವಾದ ಜಲಸ್ನಾನವನ್ನು ಮಾಡಿಸಿ ಶುದ್ಧಮಾಡಿದನು."**

ಹೌದು! ಹೇಗೆ "ಕೈಗಳು" ಮತ್ತು "ಕಾಲು"ಗಳಲ್ಲಿರುವ ಅಶುದ್ಧತೆಯನ್ನು ನೀರು ಶುದ್ಧಮಾಡುತ್ತದೋ ಹಾಗೆಯೇ ವಾಕ್ಯಗಳನ್ನು ಓದುವದರ ಮೂಲಕ ........ಕೆಲಸಗಳು ( "ಕೈಗಳು" ) ಮತ್ತು.... ಜೀವನದ ನಡೆ ( "ಕಾಲುಗಳು" )ಯನ್ನು ಶುದ್ಧ ಮಾಡುತ್ತದೆ.

**ಉದಾ:** ಕೆಟ್ಟ ಅಭ್ಯಾಸಗಳಾದ ಹೊಲಸು ಮಾತು, ಸಾರಾಯಿ ಕುಡಿಯುವದು, ಧೂಮಪಾನ ಮಾಡುವದು, ಜೂಜಾಟ, ಲೌಕಿಕವಾದ ಚಲನ ಚಿತ್ರಗಳು, ಪಾರ್ಟಿಗಳು, ಇತರೆ, ಇತರೆ.

ಈಗ "ಅಂಗಳ" ಎಂದು ಕರೆಯಲ್ಪಡುವ ಸ್ಥಳವು ಒಬ್ಬ ಕ್ರಿಸ್ತನ ಬೆಳವಣಿಗೆಯ ಮೊದಲ ಹಂತವಾಗಿದೆ – "ಕರೆಯಲ್ಪಟ್ಟ" ಹಂತ (ಮತ್ತಾಯ 22:14) ಅಥವಾ ಕೇವಲ..... "ವಿಶ್ವಾಸಿ" ಎಂಬ ನೆಲೆ.

**ಇಲ್ಲಿ ಯಜ್ಞವೇದಿ ಮತ್ತು ಗಂಗಾಳವು ಒಬ್ಬ "ವಿಶ್ವಾಸಿಯು" ಯೇಸುವಿನ ತ್ಯಾಗದ ಬಲಿಯ ಮೇಲೆ ನಂಬಿಕೆ ಇಡುವದನ್ನು ಮತ್ತು ಸತ್ಯವೇದವನ್ನು ಅಭ್ಯಾಸ ಮಾಡುವುದನ್ನು ಸೂಚಿಸುತ್ತದೆ.**

ಹಳೆಯ ಒಡಂಬಡಿಕೆಯಲ್ಲಿ ಲೇವಿಯರು (ಅರಣ್ಯಕಾಂಡ 3:5-10) "ವಿಶ್ವಾಸಿ"ಗಳಿಗೆ ಸೂಚಿತವಾಗಿದೆ. "ಪವಿತ್ರ" ಸ್ಥಳದೊಳಗೆ ಪ್ರವೇಶಿಸಲು ಯಾಜಕರಿಗೆ ಮಾತ್ರ ಅನುಮತಿಯಿರುವದು ಎರಡನೆಯ ಹಂತದ ಕ್ರೈಸ್ತ ಬೆಳವಣಿಗೆಯಲ್ಲಿರುವ "ಆರಿಸಲ್ಪಟ್ಟ" ಹಂತದಲ್ಲಿರುವ ಅಥವಾ ಕರ್ತನಾದ ಯೇಸು ಕ್ರಿಸ್ತನ "ಹಿಂಬಾಲಕರ" ಸ್ಥಿತಿಯಲ್ಲಿರುವವರನ್ನು ಸೂಚಿಸುತ್ತದೆ.

ಇವರು ತಮ್ಮ " ಚಿತ್ತ" ವನ್ನು ಕರ್ತನಿಗೆ ಒಪ್ಪಿಸಿದ್ದಾರೆ ಎಂಬುದನ್ನು ನಾವು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –


## ಮತ್ತಾಯ 16:24

**"ಯಾವನಿಗಾದರೂ ನನ್ನ ಹಿಂದೆ ಬರುವದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ"**

.........ಮತ್ತು ಪೂರ್ಣ ಪ್ರತಿಷ್ಠೆಯಲ್ಲಿ ಸೇರಿ ದೇವರ ಚಿತ್ತವನ್ನು ಮತ್ತು ಸೇವೆಯನ್ನು ಮಾಡುತ್ತಾನೆ.

(ಈ ವಿಷಯವನ್ನು ಕುರಿತು ವಿವರವಾಗಿ ನಾವು ಅಭ್ಯಾಸ **#17/ 18/ 19 –** "ಯೇಸು ಕ್ರಿಸ್ತನ ಸಭೆ"ಯಲ್ಲಿ ಅಭ್ಯಾಸ ಮಾಡಿದ್ದೇವೆ)

ಈಗ ನಾವು ಮುಖ್ಯವಾದ ಗುಡಾರದ ಕಟ್ಟಡ ಮತ್ತು "ಪರದೆಯ" ಮೂಲಕ ಒಂದು ಸ್ಥಳಕ್ಕೆ ಹೋಗುತ್ತೇವೆ ಆ ಸ್ಥಳಕ್ಕೆ "ಪರಿಶುದ್ಧ ಸ್ಥಳ" ಎಂದು ಕರೆಯಲಾಗುತ್ತದೆ.



## ಪರಿಶುದ್ಧ ಸ್ಥಳ

ಈಗ ನಾವು "ಪರಿಶುದ್ಧ ಸ್ಥಳ"ದೊಳಗೆ ಹೋಗುವದಕ್ಕೆ ಮುಂಚೆ ಇರುವ "ಪರದೆ"ಯನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದೋಣ –



**ವಿಮೋಚನಕಾಂಡ 26:36**

**"ಡೇರೆಯ ಬಾಗಿಲಿಗೆ ಹುರಿನಾರಿನ ಬಟ್ಟೆಯಲ್ಲಿ ನೀಲಿ ಧೂಮ್ರ ರಕ್ತವರ್ಣಗಳುಳ್ಳ ದಾರದಿಂದ ವಿಚಿತ್ರವಾಗಿ ಕಸೂತಿಹಾಕಿ ಪರದೆಯನ್ನು ಮಾಡಿಸಬೇಕು."**

ಹೌದು! "ಪರಿಶುದ್ಧ" ಸ್ಥಳದೊಳಗೆ ಹೋಗಲು ಇದೇ "ಬಾಗಿಲಾಗಿದೆ"!

ಗುಡಾರದ "ಬಾಗಿಲಿ"ನಂತೆಯೇ ಈ "ಪರದೆ" ಕೂಡ ನೀಲಿ,.....ಧೂಮ್ರ ಮತ್ತು.....

ರಕ್ತವರ್ಣಗಳುಳ್ಳ ದಾರದಿಂದ ವಿಚಿತ್ರವಾಗಿ ಕಸೂತಿ ಹಾಕಿ ಮಾಡಲಾಗಿದೆ.

ಲೇವಿಯರು ಇದರೊಳಗೆ ಪ್ರವೇಶಿಸಲು ಅನುಮತಿ ಇಲ್ಲವೇ ಇಲ್ಲ.

ಒಂದು ವೇಳೆ ಅವರು ಪ್ರವೇಶಿಸಲು ಪ್ರಯತ್ನಿಸಿದರೆ ಮರಣಹೊಂದುವರು.

"ಯಾಜಕರು" ಮಾತ್ರ ಈ "ಪರದೆ"ಯ ಮೂಲಕ "ಪರಿಶುದ್ಧ" ಸ್ಥಳಕ್ಕೆ ಪ್ರವೇಶಿಸಲು ಅನುಮತಿ ಹೊಂದಿದ್ದಾರೆ.

## ಇದು ಏನನ್ನು ಸೂಚಿಸುತ್ತದೆ?

ಈ "ಪರದೆ" ಎಂಬ ಸಾಧನದ ಮೂಲಕ ಒಬ್ಬ ವ್ಯಕ್ತಿಯು "ಅಂಗಳ"ದಿಂದ "ಪರಿಶುದ್ಧ" ಸ್ಥಳಕ್ಕೆ ಪ್ರವೇಶಿಸುತ್ತಾನೆ(ಳೆ)

ಆದ್ದರಿಂದ ಇದು ಏನನ್ನು ಸೂಚಿಸುತ್ತದೆ ಎಂದರೆ ಒಬ್ಬ "ವಿಶ್ವಾಸಿ"ಯು ಈ ಸಾಧನದ ಮೂಲಕ "ಹಿಂಬಾಲಕ"ನಾಗುತ್ತಾನೆ –

"ಕರೆಯಲ್ಪಟ್ಟವನು" "ಆರಿಸಲ್ಪಟ್ಟವನಾಗುತ್ತಾನೆ"

........"ಪ್ರತಿಷ್ಠೆ" ಮತ್ತು "ಯಜ್ಞದ ಮೂಲಕ ಒಡಂಬಡಿಕೆ"ಯನ್ನು ಸೂಚಿಸುತ್ತದೆ ಎಂದು ಕೀರ್ತನೆ **50:5**ರಲ್ಲಿ ಓದುತ್ತೇವೆ.

ಇದು ಸಹ "ಕ್ರೈಸ್ತನ" "ದೀಕ್ಷಾಸ್ನಾನ"ದ ವಿಷಯವಾಗಿದೆ – "ಸ್ನಾನ ದೀಕ್ಷೆ" ಒಂದೇ ಎಂದು ಎಫೆಸದವರಿಗೆ **4:5**ರಲ್ಲಿ ನೋಡುತ್ತೇವೆ – ಇದೊಂದು "ರಹಸ್ಯ ಒಡಂಬಡಿಕೆ"ಯ ಸಂಕೇತವಾಗಿವೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ.

### ಕೀರ್ತನೆ 25:14


**"ಯೆಹೋವನು ತನ್ನ ಸದ್ಭಕ್ತರಿಗೆ ಆಪ್ತಮಿತ್ರನಂತಿರುವರು; ಅವರಿಗೇ ತನ್ನ ಒಡಂಬಡಿಕೆಯ ಅನುಭವವನ್ನು ದಯಪಾಲಿಸುವನು."**

ಈ ರಹಸ್ಯ "ಯಜ್ಞದ ಮೂಲಕ ಒಡಂಬಡಿಕೆ"ಯ ಸಂಕೇತವೇ ಸತ್ಯವೇದದ "ಒಂದೇ ದೀಕ್ಷಾಸ್ನಾನ"ವಾಗಿದೆ.

ಹೌದು! ಈ ಸ್ಥಳದಲ್ಲಿಯೇ (ನಾವು) ಲೋಕಕ್ಕೆ "ಸಾಯುತ್ತೇವೆ" ಎಂದು ರೋಮಾಪುರದವರಿಗೆ **6:3** ಮತ್ತು ಕೊಲೊಸ್ಸೆಯವರಿಗೆ **3:3** ರಲ್ಲಿ ಓದುತ್ತೇವೆ. ಇದು ನಾವು ಶರಣಾಗುವದರ ಮೂಲಕ ಮತ್ತು ನಮ್ಮ(ಸ್ವಂತ) ಚಿತ್ತವನ್ನು ನಿರಾಕರಿಸುವುದರ ಮೂಲಕ ಆಗುತ್ತದೆ.

**ಈಗ ನಾವು ಪರಿಶುದ್ಧ 'ಸ್ಥಳ'ವನ್ನು ಕುರಿತು ನೋಡೋಣ**
**ಈ 'ಪರಿಶುದ್ಧ' ಸ್ಥಳವು 10 ಮೊಳ ಅಗಲ ಮತ್ತು 20 ಮೊಳ ಉದ್ದ – ಅಂದರೆ 15 ಅಡಿಗೆ 30 ಅಡಿ.**

ಹೀಗೆ ಒಬ್ಬ ವ್ಯಕ್ತಿಯು – ಬಲಗಡೆಗೆ ಅಥವಾ ಗುಡಾರದ ಉತ್ತರದ ಕಡೆಗೆ ಪ್ರವೇಶಿಸಿದಾಗ ಸಿಗುವುದೇ ಈ –



## ರೊಟ್ಟಿಯ ಮೇಜು

ಇದರ ವಿವರಗಳನ್ನು ಕುರಿತು ನಾವು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –



**ಯಾಜಕಕಾಂಡ 24:5,6**

**"ಅದಲ್ಲದೆ ನೀನು ಗೋಧಿಯ ಹಿಟ್ಟಿನಿಂದ ಹನ್ನೆರಡು ರೊಟ್ಟಿಗಳನ್ನು ಮಾಡಬೇಕು; ಪ್ರತಿಯೊಂದು ರೊಟ್ಟಿಯು ಆರಾರು ಸೇರಿನದಾಗಿರಬೇಕು. ಅವುಗಳನ್ನು ಆರಾರರ ಮೇರೆಗೆ ಎರಡು ರಾಶಿಗಳಾಗಿ ಚೊಕ್ಕ ಬಂಗಾರದ ಮೇಜಿನ ಮೇಲೆ ಯೆಹೋವನ ಸನ್ನಿಧಿಯಲ್ಲಿ ಇಡಬೇಕು."**

ಈ ಮೇಜು ಮರದಿಂದ ಮಾಡಿದ್ದಾಗಿದೆ. ಇದನ್ನು ಬಂಗಾರದಿಂದ ಲೇಪಿಸಲಾಗಿದೆ. ಮತ್ತು ಇದರ ಮೇಲೆ ಹನ್ನೆರಡು **(12)** ಹುಳಿಯಿಲ್ಲದ ರೊಟ್ಟಿಯನ್ನು ಎರಡು **(2)** ರಾಶಿಗಳಾಗಿ ಸಮತಲವಾಗಿ ಅಥವಾ ಲಂಬವಾಗಿ ಇಡಲಾಗಿದೆ.

ಈಗ ಈ "ಸಾಲುಗಳು" ಲಂಬವಾಗಿದೆಯಾ ಅಥವಾ ಸಮತಲವಾಗಿದೆಯಾ ಎಂದು ನಮಗೆ ತಿಳಿಸಲಿಲ್ಲ ಆದರೆ ನಾವು ಅದು ಲಂಬವಾದ ಒಂದರ ಮೇಲೆ ಒಂದಿರುವ (ಎರಡು) "ಸಾಲುಗಳ" "ರೊಟ್ಟಿಗಳು" ಎಂದು ಪರಿಗಣಿಸುತ್ತೇವೆ!

(ಈ ವಿಷಯವಾಗಿ ನಾವು ಹೇಳುವುದಕ್ಕೆ ಕಾರಣವನ್ನು ವಚನ 7ರಲ್ಲಿ ಹೀಗೆ ಓದುತ್ತೇವೆ....

**"ಒಂದೊಂದು ರಾಶಿಯ ಮೇಲೆ ಸ್ವಚ್ಛವಾದ ಧೂಪವನ್ನು ಇಡಬೇಕು......."**

ಈ ಮೇಲಿನ ವಾಕ್ಯದ ಮೂಲಕ ನಮಗೆ ತಿಳಿದುಬರುವುದೇನೆಂದರೆ...... ಇದು ಎರಡು ಆರು ರೊಟ್ಟಿಗಳು ರಾಶಿಗಳಾಗಿ ಮತ್ತು ಲಂಬವಾಗಿ ಜೋಡಿಸಲಾಗಿದೆ).

ಅದು ಪರಿಶುದ್ಧವಾದದ್ದು ಮತ್ತು ಯಾಜಕರು ಮಾತ್ರ ತಿನ್ನಬಹುದಾಗಿತ್ತು ಎಂದು ಯಾಜಕಕಾಂಡ **24:9**ರಲ್ಲಿ ಓದುತ್ತೇವೆ ಮತ್ತು ಅದನ್ನು ಪ್ರತಿ ಏಳನೆಯ ದಿನ ಅಥವಾ ಸಬ್ಬತ್ ದಿನದಲ್ಲಿ ನವೀಕರಿಸ (ಬದಲಾಯಿಸ) ಬೇಕು.

**ವಾಕ್ಯ 8 –** **"ಯಾಜಕನು ಯಾವಾಗಲೂ ಪ್ರತಿ ಸಬ್ಬತ್ ದಿನದಲ್ಲಿ ರೊಟ್ಟಿಗಳನ್ನು ತಂದು ಯೆಹೋವನ ಸನ್ನಿಧಿಯಲ್ಲಿ ಕ್ರಮಪಡಿಸಬೇಕು."**

**ಇವೆಲ್ಲಾ ಏನ್ನನ್ನು ಸೂಚಿಸುತ್ತದೆ?**

ಇಲ್ಲಿ ಈ ರೊಟ್ಟಿಯನ್ನು ಲಂಬವಾಗಿ ಒಂದರ ಮೇಲೆ ಒಂದಿರುವ "ಆರು" ರೊಟ್ಟಿಗಳ ಎರಡು ಸಾಲಿನ ವ್ಯವಸ್ಥೆಯು ಒಬ್ಬ ಕ್ರೈಸ್ತನಿಗೆ ಆತ್ಮೀಕ ಆಹಾರವಾಗಿದೆ – ದೇವರ ವಾಕ್ಯವಾದ – ಸತ್ಯವೇದ ಮತ್ತು ಅದರ 66 ಪುಸ್ತಕಗಳು!




ಯಾಜಕರಿಗೆ ಮಾತ್ರ ಆಹಾರವಾಗಿರುವದು ಏನ್ನನ್ನು ಸೂಚಿಸುತ್ತದೆ ಎಂದರೆ ಸತ್ಯವೇದದ ಆತ್ಮೀಕ ಸತ್ಯಗಳನ್ನು ಪ್ರತಿಷ್ಠೆ ಮಾಡಿರುವ ಹಿಂಬಾಲಕರು ಅಥವಾ "ಆರಿಸಲ್ಪಟ್ಟ" ವರ್ಗದವರು ಮಾತ್ರ ಅರ್ಥಮಾಡಿಕೊಳ್ಳಲು ಅಥವಾ "ಜೀರ್ಣಿಸಿಕೊಳ್ಳಲು"

ಸಾಧ್ಯ ಇವರು ಕ್ರೈಸ್ತರ ಮಧ್ಯದಲ್ಲಿ "ಯಾಜಕರಾಗಿದ್ದು ತಮ್ಮ ಶರೀರಗಳನ್ನು "ಜೀವ ಬಲಿಯಾಗಿ' ಅರ್ಪಿಸಿದವರು'.

ಹುಳಿಯಿಲ್ಲದ ರೊಟ್ಟಿಯು ಪವಿತ್ರವಾದ ಸತ್ಯವನ್ನು ಸೂಚಿಸುತ್ತದೆ.

ಮತ್ತು ಪ್ರತೀ "ಸಬ್ಬತ್" ದಿನಗಳಲ್ಲಿ ಈ ರೊಟ್ಟಿಗಳನ್ನು ನವೀಕರಿಸುವದು ಆತ್ಮೀಕ ಆಹಾರವನ್ನು ಸೇವಿಸುವದನ್ನು ಮತ್ತು ಸಭೆಗಳಲ್ಲಿ ಪ್ರತಿ ಭಾನುವಾರದಂದು ಮತ್ತು ಪ್ರತಿಷ್ಟೆ ಮಾಡಿರುವ ಸಭೆಯ ಸದಸ್ಯರು ಸೇರುವಾಗ ಈ "ಹೊಸ" ವಿಷಯಗಳನ್ನು ಪಡೆಯುವದನ್ನು ಸೂಚಿಸುತ್ತದೆ.


ಈಗ ಈ ಮೇಜಿನ ಎದುರಿನಲ್ಲಿ ಅಂದರೆ ಗುಡಾರದ ಉತ್ತರ ದಿಕ್ಕಿನಲ್ಲಿ ಇರುವುದೇನೆಂದರೆ –

## ಏಳು ಕೊಂಬೆಗಳ ದೀಪಸ್ತಂಭ

ಇದನ್ನು ಕುರಿತು ವಿವರವಾಗಿ ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ವಿಮೋಚನಕಾಂಡ 37:17-24**

"ಮತ್ತು ಚೊಕ್ಕಬಂಗಾರದ ದೀಪಸ್ತಂಭವನ್ನು ಮಾಡಿದನು. ಅದರ ಬುಡವನ್ನೂ ಕಂಬವನ್ನೂ ನಕಾಸಿಕೆಲಸದಿಂದ ಮಾಡಿದನು.





**ಆ ದೀಪಸ್ತಂಭವೆಲ್ಲಾ ಅಖಂಡವಾಗಿ ಪುಷ್ಪಪಾತ್ರೆಗಳಂತೆಯೂ ಪುಷ್ಪಗಳಂತೆಯೂ ಅಲಂಕಾರವಾಗಿ ಕೆತ್ತಿತ್ತು. ಕಂಬದ ಒಂದೊಂದು ಪಾರ್ಶ್ವದಲ್ಲಿ ಮೂರು ಮೂರು ಕೊಂಬೆಗಳು ಅಂತೂ ಆರು ಕೊಂಬೆಗಳು ಇದ್ದವು. ಪ್ರತಿಯೊಂದು ಕೊಂಬೆಯಲ್ಲಿ ಬಾದಾಮಿ ಹೂವುಗಳಂತಿರುವ ಮೂರು ಮೂರು ಪುಷ್ಪಾಲಂಕಾರಗಳಿದ್ದವು; ಒಂದೊಂದು ಅಲಂಕಾರಕ್ಕೆ ಒಂದು ಪುಷ್ಪಪಾತ್ರೆಯೂ ಒಂದು ಪುಷ್ಪವೂ ಇದ್ದವು. ಆರು ಕೊಂಬೆಗಳನ್ನೂ ಹಾಗೆಯೇ ಮಾಡಿದನು. ದೀಪಸ್ತಂಭದ ಕಡ್ಡಿಯಲ್ಲಿ ಪುಷ್ಪಪಾತ್ರೆಗಳೂ ಪುಷ್ಪಗಳೂ ಇರುವ ಬಾದಾಮಿ ಹೂವುಗಳಂತೆ ನಾಲ್ಕು ಪುಷ್ಪಲಂಕಾರಗಳು ಇದ್ದವು.ಎರಡೆರಡು ಕೊಂಬೆಗಳು ಕವಲು ಒಡೆದಿರುವ ಸ್ಥಳಗಳಲ್ಲೆಲ್ಲಾ ಒಂದೊಂದು ಪುಷ್ಪಪಾತ್ರೆ ಇತ್ತು. ಪುಷ್ಪಪಾತ್ರೆಗಳೂ ಕೊಂಬೆಗಳೂ ಸಹಿತವಾದ ದೀಪಸ್ತಂಭವನ್ನೆಲ್ಲಾ ಒಟ್ಟಿಗೆ ಚೊಕ್ಕಬಂಗಾರದಿಂದ ನಕಾಸಿಕೆಲಸದಿಂದ ಮಾಡಿದನು. ಅದರ ಏಳು ಹಣತೆಗಳನ್ನೂ ಅದರ ಕತ್ತರಿಗಳನ್ನೂ ದೀಪದ ಕುಡಿತೆಗೆಯುವ ಬಟ್ಟಲುಗಳನ್ನೂ ಚೊಕ್ಕಬಂಗಾರದಿಂದ ಮಾಡಿದನು. ದೀಪಸ್ತಂಭವೂ ಅದರ ಎಲ್ಲಾಉಪಕರಣಗಳೂ ಒಂದು ತಲಾಂತು ಚೊಕ್ಕಬಂಗಾರದವುಗಳಾಗಿದ್ದವು."**

ಹೌದು! ಇಲ್ಲಿ ಈ ಬಂಗಾರದ ದೀಪಸ್ತಂಭ ಮತ್ತು ಅದನ್ನು ಮಾಡುವ ಅತಿ ತೊಡಕಿನ ವಿಷಯವನ್ನು ಬಹಳ ವಿವರವಾಗಿ ಹೇಳಲಾಗಿದೆ!!

ಇದನ್ನು ಚೊಕ್ಕ ಬಂಗಾರದಿಂದ ಮಾಡಲಾಗಿದೆ ಹಾಗು 'ನಕಾಸಿ ಕೆಲಸದಿಂದ' ಮಾಡಲಾಗಿದೆ ಮತ್ತು ಏಳು ಕೊಂಬೆಗಳಿವೆ, ಪ್ರತಿ ಕೊಂಬೆಗಳ ಕೊನೆಯಲ್ಲಿ ದೀಪಗಳಿದ್ದವು.

ಆದ್ದರಿಂದ ಈ ದೀಪಸ್ತಂಭದ ಮೇಲೆ ಏಳು ದೀಪಗಳಿದ್ದವು.

ಪರಿಶುದ್ಧ" ಸ್ಥಳದಲ್ಲಿ ಇದೊಂದೇ ಒಂದು ಬೆಳಕಿತ್ತು ಏಕೆಂದರೆ, ಅನೇಕ ಹೊದಿಕೆ ಮತ್ತು "ಪರದೆಗಳ" ಮೂಲಕ ಹೊರಗಿನ ಸೂರ್ಯನ ಬೆಳಕು ಸ್ವಲ್ಪವೂ ಬರದಂತೆ ನೋಡಿಕೊಳ್ಳಲಾಗುತ್ತಿತ್ತು.

ಈ ದೀಪಸ್ತಂಭದ ಏಳು ಕೊಂಬೆಗಳನ್ನು ವಿಶಿಷ್ಟವಾದ ನಕಾಸಿ ಕೆಲಸದಿಂದ ಮಾಡಲಾಗಿತ್ತು ಮತ್ತು ಬಾದಾಮಿ ಹೂಗಳಂತಿರುವ ಪುಷ್ಪ ಪಾತ್ರೆಗಳಿದ್ದವು ಮತ್ತು ಒಂದಾದ ನಂತರ ಒಂದರಂತೆ "ಹೂವು ಮತ್ತು ಹಣ್ಣು"ಗಳಂತೆ ಇದ್ದವು.

ಅದರ ಏಳು ದೀಪಗಳನ್ನು ಮಹಾ ಯಾಜಕನಲ್ಲದೆ ಬೇರೆ ಯಾರೂ ನೋಡಿಕೊಳ್ಳುತ್ತಿರಲಿಲ್ಲ ದೀಪಗಳ ಬತ್ತಿಯನ್ನು ಸರಿಮಾಡುವದು, ದೀಪಕ್ಕೆ ಬೇಕಾದ ಎಣ್ಣೆಯನ್ನು ಒದಗಿಸುವದು ಮುಂತಾದ ಕಾರ್ಯಗಳನ್ನು ಮಹಾ

ಯಾಜಕನು ನೋಡಿಕೊಳ್ಳುತ್ತಿದ್ದನು.

ಆದ್ದರಿಂದ ಈ ದೀಪಸ್ತಂಭದ ಬೆಳಕು ಉರಿಯುವದು, ಆತನು ಜಾಗರೂಕತೆಯಿಂದ ನೋಡಿಕೊಳ್ಳುವುದರಲ್ಲಿತ್ತು.

**ಇವೆಲ್ಲಾ ಏನ್ನನ್ನು ಸೂಚಿಸುತ್ತದೆ?**

"ಪರಿಶುದ್ಧ" ಸ್ಥಳದಲ್ಲಿರುವ ಒಂದೇ ಒಂದು ಬೆಳಕು ಎಂದರೆ ಈ "ದೀಪಸ್ತಂಭ" ಇದು ಒಬ್ಬ ಕ್ರೈಸ್ತನು "ಆರಿಸಲ್ಪಟ್ಟವನಾಗಿ" ಅಥವಾ ಯಜಮಾನನಾಗಿ ಯೇಸುವಿನ ಹಿಂಬಾಲಕನಾಗಿ "ಪರಿಶುದ್ಧ ಸ್ಥಿತಿ" ಅಥವಾ ಪ್ರತಿಷ್ಟಿತ ಸ್ಥಿತಿಯಲ್ಲಿರುವದನ್ನು ಸೂಚಿಸುತ್ತದೆ. ಅವರ ಬೆಳಕು ಬಹಳ ವಿಶೇಷವಾದದ್ದು ಮತ್ತು ಇದನ್ನು ಅಪೊಸ್ತಲನಾದ ಪೇತ್ರನು ಕೆಳಗಿನ ವಾಕ್ಯದಲ್ಲಿ ಈ ರೀತಿಯಾಗಿ ವಿವರಿಸುತ್ತಾನೆ –

**1 ಪೇತ್ರನು 2:9**

**"ನೀವಾದರೋ ನಿಮ್ಮನ್ನು ಕತ್ತಲೆಯೊಳಗಿಂದ ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸಿದಾತನ ಗುಣಾತಿಶಯಗಳನ್ನು ಪ್ರಚಾರಮಾಡುವವರಾಗುವಂತೆ ದೇವರಾದುಕೊಂಡ ಜನಾಂಗವೂ ರಾಜವಂಶಸ್ಥರಾದ ಯಾಜಕರೂ ಮೀಸಲಾದ ಜನವೂ ದೇವರ ಸ್ವಕೀಯ ಪ್ರಜೆಯೂ ಆಗಿದ್ದೀರಿ."**

ಹೌದು! ಆ ದೀಪದಲ್ಲಿರುವ ಎಣ್ಣೆಯು ಪವಿತ್ರಾತ್ಮನನ್ನು ಸೂಚಿಸುತ್ತದೆ ಮತ್ತು ಆ ಬೆಳಕು ಬೀಸುವದು ಪವಿತ್ರಾತ್ಮನಿಂದ ಸತ್ಯದ ಜ್ಞಾನೋದಯವಾಗುವದನ್ನು ಸೂಚಿಸುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಯೋಹಾನ 16:13**

**"ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು. ಆತನು ತನ್ನಷ್ಟಕ್ಕೆ ತಾನೇ ಮಾತಾಡದೆ ಕೇಳಿದ ಮಾತುಗಳನ್ನೇ ಆಡುವನು; ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು."**

ಹೌದು! ನಿಜವಾಗಿಯೂ ಈ ಬೆಳಕು ಪ್ರವಾದನೆಯನ್ನು ತಿಳಿದು ಕೊಳ್ಳುವಂತದಾಗಿದೆ –

**"ಬರಬೇಕಾದ ವಿಷಯಗಳು"**

ಮತ್ತು ಅದ್ಭುತವಾದ ದೇವರ ದೈವೀಕ ಯೋಜನೆ –

**"ಇಲ್ಲಿ ಸ್ವಲ್ಪವೂ ಮತ್ತು ಅಲ್ಲಿ ಸ್ವಲ್ಪವೂ"** ಇರುವ ಸಂಕೇತ, ಛಾಯೆ ಮತ್ತು ಸಾಮ್ಯರೂಪ ಭಾಷೆಗಳನ್ನು ಆಳವಾಗಿ ಅರ್ಥಮಾಡಿಕೊಳ್ಳುವಂತದಾಗಿದೆ.

**ನಿಜವಾಗಿಯೂ ಒಬ್ಬ ಸಾಧಾರಣ ಕ್ರೈಸ್ತ "ವಿಶ್ವಾಸಿಯು" ಈ ಸತ್ಯವನ್ನು ಅರ್ಥಮಾಡಿಕೊಳ್ಳಲಾರನು.ಹೇಗೆ ಛಾಯೆಯಲ್ಲಿ ಲೇವಿಯರನ್ನು "ಪರಿಶುದ್ಧ" ಸ್ಥಳದೊಳಗೆ ಹೋಗಲು ಅನುಮತಿ ಇಲ್ಲವೋ ಹಾಗೆಯೇ ಇವರಿಗೆ "ಪರಿಶುದ್ಧ"ದ ಬೆಳಕನ್ನು ನೋಡಲು ಅನುಮತಿ ನೀಡಲಿಲ್ಲ.**

ಆ ದೀಪಸ್ತಂಭವನ್ನು ನೋಡಿಕೊಳ್ಳುತ್ತಿದ್ದ ಆ ಮಹಾಯಾಜಕನು ನಮ್ಮೆಲ್ಲರ ಮಹಾಯಾಜಕನೂ ಮತ್ತು ಸಭೆಗೆ ತಲೆಯೂ ಆದ ಕರ್ತನಾದ ಯೇಸುವನ್ನು ಸೂಚಿಸುತ್ತದೆ. ನಮ್ಮ ಕರ್ತನು ವೈಯಕ್ತಿಕವಾಗಿ ಈ ಸತ್ಯದ "ಬೆಳಕು" ಬೀಸುವಂತೆ ನೋಡಿಕೊಳ್ಳುತ್ತಾನೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –



**ಪ್ರಕಟನೆ 1:13**

**"ಏಳು ಚಿನ್ನದ ದೀಪಸ್ತಂಭಗಳನ್ನೂ ಆ ದೀಪಸ್ತಂಭಗಳ ಮಧ್ಯದಲ್ಲಿ ಮನುಷ್ಯಕುಮಾರನಂತೆ ಇರುವವನನ್ನೂ ಕಂಡೆನು.........."**

ಈಗ ಈ ದೀಪಸ್ತಂಭದ ಏಳು ಕೊಂಬೆಗಳು ಏಳು ಸಭೆಗಳ ಮಹಾ ಸತ್ಯಗಳನ್ನು ಸೂಚಿಸುತ್ತದೆ ಎಂದು ಪ್ರಕಟನೆ **2** ಮತ್ತು **3**ನೆಯ ಅಧ್ಯಾಯದಲ್ಲಿ ಓದುತ್ತೇವೆ.

(ಅಭ್ಯಾಸ # 45ರಲ್ಲಿ ಈ ವಿಷಯವನ್ನು ಕುರಿತು ವಿವರವಾಗಿ ನೋಡಲಿದ್ದೇವೆ) ಕೊನೆಯದಾಗಿ ವಿಶಿಷ್ಟವಾದ "ನಕಾಸಿ ಕೆಲಸ" ಮತ್ತು ಹೂವು ಮತ್ತು ಅಲಂಕಾರವು ಸಭೆಯ ಗುಣವನ್ನು ಕಟ್ಟಲ್ಪಡುವದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

### ಅಪೋಸ್ತಲರ ಕೃತ್ಯಗಳು 14:22


**"ನಾವು ಬಹು ಸಂಕಟಗಳನ್ನು ತಾಳಿ ದೇವರ ರಾಜ್ಯದೊಳಗೆ ಸೇರಬೇಕೆಂಬದಾಗಿ ಎಚ್ಚರಿಕೆಯ ಮಾತನ್ನು ಹೇಳಿ ಕ್ರಿಸ್ತ ನಂಬಿಕೆಯಲ್ಲಿ ಸ್ಥಿರವಾಗಿರಿ ಎಂದು ಅವರನ್ನು ಧೈರ್ಯಗೊಳಿಸಿದರು."**


ಹೌದು! ಸಂಕಟಗಳ ಅಥವಾ "ನಕಾಸಿ ಕೆಲಸ"ಗಳ ಮೂಲಕ ಸಭೆಯ ಗುಣಲಕ್ಷಣಗಳು ಬೆಳವಣಿಗೆಯಾಗುತ್ತದೆ ಆದರೆ ಬೆಳವಣಿಗೆ ಹೊಂದಿದ ಗುಣಲಕ್ಷಣಗಳು ಹೂವು ಮತ್ತು ಹಣ್ಣು ಇದ್ದಂತೆ. ಏಕೆಂದರೆ ದೇವರ ದೃಷ್ಟಿಯಲ್ಲಿ ಅದು ಸುಂದರವಾಗಿಯೂ ಮತ್ತು ಫಲದಾಯಕವಾಗಿಯೂ ಇವೆ!

ನಂತರ "ಮಹಾ ಪರಿಶುದ್ಧ" ಸ್ಥಳಕ್ಕೆ ಕೊಂಡೊಯ್ಯುವ ಎರಡನೆಯ ಪರದೆಯ ಬಳಿ ಇರುವದೇನೆಂದರೆ–

## "ಚಿನ್ನದ ಧೂಪವೇದಿ"

ಇದರ ವಿವರವನ್ನು ಕುರಿತು ನಾವು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –





## ವಿಮೋಚನಕಾಂಡ 40:26,27

**"ಮತ್ತು ಯೆಹೋವನು ಆಜ್ಞಾಪಿಸಿದಂತೆ ಚಿನ್ನದ ಧೂಪವೇದಿಯನ್ನು ದೇವದರ್ಶನದ ಗುಡಾರದಲ್ಲಿ ತೆರೆಯ ಮುಂದೆ ಇಟ್ಟು ಅದರ ಮೇಲೆ ಪರಿಮಳ ದ್ರವ್ಯಗಳ ಧೂಪವನ್ನು ಹಾಕಿದನು. ಮತ್ತು ಮೋಶೆ ಗುಡಾರದ ಬಾಗಿಲಿಗೆ ಪರದೆಯನ್ನು ಹಾಕಿದನು."**

ಹೌದು! ಇದೊಂದು ಮರದಿಂದ ತಯಾರಿಸಿ ಬಂಗಾರದಿಂದ ಲೇಪಿಸಿದ ಚಿಕ್ಕ ವೇದಿಕೆಯಾಗಿದ್ದು ಇದನ್ನು "ಚಿನ್ನದ ವೇದಿ" ಅಥವಾ "ಧೂಪವೇದಿ" ಎಂದು ಕರೆಯಲಾಗುತ್ತದೆ. ಮತ್ತು ಯಾಜಕನು ಇದರ ಮೇಲೆ ಇಜ್ಜಲು ಮತ್ತು "ಕೈ ಹಿಡಿಯಷ್ಟು" ಪುಡಿ ಮಾಡಿದ ಧೂಪವನ್ನು ಹಾಕುತ್ತಿದ್ದನು. ಇದರಿಂದ ಅದು ಸುವಾಸನೆಯನ್ನೂ ಮತ್ತು ಹೊಗೆಯು "ಪರಿಶುದ್ಧ" ಸ್ಥಳದೊಳಗೆ ತುಂಬಿಕೊಳ್ಳುತ್ತಿದ್ದವು, ಇದು ಮಾತ್ರವಲ್ಲದೆ ಅದು "ಪರದೆಯ" ಒಳಗಿನಿಂದಲೂ ನುಸುಳಿ ಮಹಾ ಪರಿಶುದ್ಧ ಸ್ಥಳದೊಳಗೆ ಪ್ರವೇಶಿಸುತ್ತಿದ್ದವು.

### ಇವೆಲ್ಲಾ ಏನ್ನನ್ನು ಸೂಚಿಸುತ್ತದೆ?

ಇಲ್ಲಿ "ಪರಿಶುದ್ಧ" ಸ್ಥಳದೊಳಗಿರುವ ಮೂರನೇ ವಸ್ತು ಯೇಸುಕ್ರಿಸ್ತನ ಹೆಜ್ಜೆಜಾಡಿನಲ್ಲಿ ಹಿಂಬಾಲಿಸುವ ಕ್ರೈಸ್ತರ ಪ್ರತಿಷ್ಠಿತ ಅಥವಾ "ಆರಿಸಲ್ಪಟ್ಟ" ಸ್ಥಿತಿಯನ್ನು ಸೂಚಿಸುತ್ತದೆ.

**ಹೌದು! ಇದು ಪ್ರತಿದಿನ ಯಜ್ಞವನ್ನು ಅರ್ಪಿಸುವ ಪ್ರತಿಷ್ಠಿತ (ಪಡಿಸಿ ಕೊಂಡ) ಕ್ರೈಸ್ತರನ್ನು ಸೂಚಿಸಲಾಗುತ್ತದೆ!**

ಬನ್ನಿ ಇದು ಹೇಗೆಂದು ನೋಡೋಣ –

ಒಂದು "ಕೈ ತುಂಬು"ವಷ್ಟು ಧೂಪವು ಪ್ರತಿಯೊಬ್ಬರ ಸಾಮರ್ಥ್ಯವನ್ನು ಸೂಚಿಸುತ್ತದೆ –

ಇದು ಒಬ್ಬ ಸಹೋದರನಿಗಿಂತ ಮತ್ತೊಬ್ಬ ಸಹೋದರನ ಕೈ ಅಳತೆ ಮತ್ತು ಒಬ್ಬ ಸಹೋದರಿಗಿಂತ ಮತ್ತೊಬ್ಬ ಸಹೋದರಿಯ ಕೈ ಅಳತೆ ಬೇರೆ ಬೇರೆ ಆಗಿರುತ್ತದೆ. ಸಾಮಾನ್ಯವಾಗಿ ಸಹೋದರಿಯರ ಕೈಗಳು ಚಿಕ್ಕದಾಗಿರುವದರಿಂದ ಚಿಂತಿಸಬಾರದು.

ಏಕೆಂದರೆ ಇದು ಸಾಂಕೇತಿಕವಾಗಿದೆ ನಿಜವಾದದ್ದು ಲೆಕ್ಕಕ್ಕೆ ಬರುತ್ತದೆ ಮತ್ತು ಸಾಂಕೇತಿಕವಲ್ಲ!

ಆದರೆ, ಹೌದು! ಪ್ರತಿಯೊಬ್ಬರು ತಾವು ಹೊಂದಿರುವ ತಾಲಂತುಗಳ ಮೇರೆಗೆ ಅವರು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ತ್ಯಾಗಬಲಿ ಮಾಡುತ್ತಾರೆ!

ಈಗ "ಕಲ್ಲಿದ್ದಲು" (ಇಜ್ಜಲು) ಹಗೆತನವುಳ್ಳ ಲೋಕವನ್ನು ಸೂಚಿಸುತ್ತದೆ ಮತ್ತು ಅದರೊಂದಿಗೆ ಮಾಡುವ "ಸಂಪರ್ಕ"ದಿಂದ ಅಗ್ನಿಮಯವಾದ ಅನುಭವಗಳುಳ್ಳ ವಿರೋಧತ್ವ ಉಂಟಾಗುತ್ತದೆ.

ಈ ಬೆಂಕಿಯ ಅನುಭವಗಳು "ಸುಗಂಧವಾಸನೆಯ ಹೊಗೆ"ಯಾಗಿ ಹೊರ ಬರುತ್ತದೆ.

ಇದು ಪ್ರತಿಷ್ಠೆಪಡಿಸಿಕೊಂಡ ಕ್ರೈಸ್ತನ ಅನುಭವಗಳಿಂದ ವ್ಯಕ್ತವಾಗುವದನ್ನು ಸೂಚಿಸುತ್ತದೆ ಮತ್ತು ಇದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ವಿವರಿಸಲಾಗಿದೆ –


**ಎಫೆಸದವರಿಗೆ 5:2**


**"ಕ್ರಿಸ್ತನು ನಿಮ್ಮನ್ನು ಪ್ರೀತಿಸಿ ನಮ್ಮೆಲ್ಲರಿಗೋಸ್ಕರ ತನ್ನನ್ನೇ ದೇವರಿಗೆ ಸುಗಂಧ ವಾಸನೆಯಾದ ಕಾಣಿಕೆಯಾಗಿಯೂ ಯಜ್ಞವಾಗಿಯೂ ಸಮರ್ಪಿಸಿಕೊಂಡ ಪ್ರಕಾರ ನೀವೂ ಪ್ರೀತಿಯಲ್ಲಿ ನಡೆದುಕೊಳ್ಳಿರಿ."**

ಅಗೋ! "ಸುಗಂಧ ವಾಸನೆ"ಯು ವ್ಯಕ್ತವಾಗುವ ಗುಣಲಕ್ಷಣವನ್ನು ಸೂಚಿಸುತ್ತದೆ ಮತ್ತು ಪವಿತ್ರಾತ್ಮನ ಫಲಗಳುಪ್ರದರ್ಶನವಾಗುವದು "ಪರಿಶುದ್ಧ ಸ್ಥಳದಲ್ಲಿ" ತುಂಬುವದು ಮಾತ್ರವಲ್ಲ, ಅಥವಾ "ಸಹ–ಯಾಜಕರು" ಅಥವಾ ಸಹೋದರರು ಮಾತ್ರ ನೋಡಿ ಮೆಚ್ಚುವದು ಮಾತ್ರವಲ್ಲ. ಆದರೆ ಅದು ಇನ್ನು ಮುಂದೆ ಮಹಾ ಪರಿಶುದ್ಧ ಸ್ಥಳದೊಳಗೆ ಹೋಗುತ್ತದೆ ಅಥವಾ ಸ್ವತಃ ದೇವರೇ ನೋಡಿ ಸಮ್ಮತಿಸುತ್ತಾನೆ!

ಈಗ ನಾವು ಇನ್ನೊಂದು "ಪರದೆ"ಯ ಬಳಿ ಬರುತ್ತೇವೆ ಇದು ನಮ್ಮನ್ನು ಕೊಂಡೊಯ್ಯುವ ಸ್ಥಳ ಯಾವುದೆಂದರೆ –

# ಮಹಾ ಪರಿಶುದ್ಧ ಸ್ಥಳ





ಈಗ ಈ "ತೆರೆಯ" ವಿವರಗಳನ್ನು ಕುರಿತು
ಕೆಳಗಿನ ವಾಕ್ಯದಲ್ಲಿ ಓದೋಣ -

### ವಿಮೋಚನಕಾಂಡ 26:31-33

**"ಹುರಿನಾರಿನ ಬಟ್ಟೆಯಲ್ಲಿ ನೀಲ ಧೂಮ್ರ ರಕ್ತವರ್ಣಗಳುಳ್ಳ ದಾರದಿಂದ ಕೆರೂಬಿಗಳನ್ನು ಚಮತ್ಕಾರವಾಗಿ ಕಸೂತಿ ಹಾಕಿ ಒಂದು ತೆರೆಯನ್ನು ಮಾಡಿಸಬೇಕು. ಜಾಲೀಮರದಿಂದ ನಾಲ್ಕು ಬೆಳ್ಳಿಯ ಗದ್ದಿಗೇ ಕಲ್ಲುಗಳ ಮೇಲೆ ನಿಲ್ಲಿಸಿ ಚಿನ್ನದ ಕೊಂಡಿಗಳಂದ ಆ ತೆರೆಯನ್ನು ಆ ನಾಲ್ಕು ಕಂಬಗಳಿಗೆ ಸಿಕ್ಕಿಸಬೇಕು. ಆ ತೆರೆಯನ್ನು ಕೊಂಡಿಗಳಿಗೆ ಸಿಕ್ಕಿಸಿದಾಗ ಅದರೊಳಗೆ ಆಜ್ಞಾಶಾಸನಗಳ ಮಂಜೂಷವನ್ನು ತರಿಸಿಡಬೇಕು, ಆ ತೆರೆಯು ಪವಿತ್ರ ಸ್ಥಾನವೆಂಬದನ್ನೂ ಮಹಾ ಪವಿತ್ರಸ್ಥಾನವೆಂಬದನ್ನೂ ಬೇರೆ ಬೇರೆ ಮಾಡುವದು."**

ಹೌದು! ಈ "ತೆರೆಯು" ಗುಡಾರದೊಳಗಿನ ಎರಡನೆಯ "ತೆರೆ"ಯಾಗಿದೆ ಮತ್ತು ಇದು "ಪವಿತ್ರಸ್ಥಾನ" ಮತ್ತು "ಮಹಾ ಪವಿತ್ರಸ್ಥಾನವನ್ನು" ಬೇರ್ಪಡಿಸುವಂಥದಾಗಿದೆ.

ಇದರ ಮೂಲಕವಾಗಿ ಮಾತ್ರವೇ "ಮಹಾ ಪವಿತ್ರ ಸ್ಥಾನ"ದೊಳಗೆ ಪ್ರವೇಶಿಸಲು ಸಾಧ್ಯ ಮತ್ತು ವರ್ಷಕ್ಕೊಮ್ಮೆ ಪಾಪ ನಿವಾರಣೆಯ ದಿನದಲ್ಲಿ ಕೃಪಾಸನದ ಮೇಲೆ ಬಲಿಯ "ರಕ್ತ"ವನ್ನು ಅರ್ಪಿಸಲು ಮಹಾಯಾಜಕನು ಮಾತ್ರ ಒಳಗೆ ಪ್ರವೇಶಿಸುವನು.

ಈ ಪರದೆಯು ಬಹಳ ದಪ್ಪದಾಗಿದ್ದು ಬಹಳ ಭಾರವುಳ್ಳದಾಗಿದೆ ಮತ್ತು ಹುರಿನಾರಿನ ಬಟ್ಟೆಯಲ್ಲಿ.... ನೀಲಿ ಧೂಮ್ರ ರಕ್ತವರ್ಣಗಳುಳ್ಳ ದಾರದಿಂದ ಕೆರೂಬಿಗಳನ್ನು ಚಮತ್ಕಾರವಾಗಿ ಕಸೂತಿ ಹಾಕಿದ ತೆರೆಯು ಪವಿತ್ರಸ್ಥಾನದಲ್ಲಿರುವ ಯಾಜಕರಿಗೆ ಮಾತ್ರ ಕಾಣಿಸುತ್ತದೆ.

**ಯೇಸು ಕ್ರಿಸ್ತನ ಮರಣದ ಸಮಯದಲ್ಲಿ ಈ "ಪರದೆ"ಯೇ ಆಲಯದಲ್ಲಿ ಹರಿದು ಹೋಯಿತೆಂದು ಮತ್ತಾಯ 27:51 ಮತ್ತು ಲೂಕ 23:45ರಲ್ಲಿ ದಾಖಲಾಗಿದೆ.**

ಒಂದು ವೇಳೆ ಮಹಾಯಾಜಕನು ಈ ಪರದೆ ಒಳಗೆ ಪ್ರವೇಶಿಸುವ ಮೊದಲು ಆತನು ಮಾಡಬೇಕಾದ ಎಲ್ಲಾ ನಿಯಮಗಳನ್ನು ನೆರವೇರಿಸದೆ ಈ ಪರದೆಯೊಳಗೆ ಪ್ರವೇಶಿಸಿದರೆ ಆತನು ಸಾಯುವನು.

### ಇವೆಲ್ಲಾ ಏನನ್ನು ಸೂಚಿಸುತ್ತದೆ?

ಮೊದಲನೆಯದಾಗಿ ನಾವು ಮೂರೂ "ಪರದೆ"ಗಳಿಗೆ ಇರುವ ಬಣ್ಣಗಳನ್ನು ಕುರಿತು ನೋಡೋಣ. "ಬಾಗಿಲು"......, ಮೊದಲನೆಯ "ಪರದೆ"...... ಮತ್ತು ಎರಡನೆಯ "ಪರದೆ".

ಹೌದು! ಈ ಬಣ್ಣಗಳು ಕರ್ತನಾದ ಯೇಸುವಿನ ಗುಣಗಳನ್ನು ಸೂಚಿಸುತ್ತದೆ.

**ನೀಲಿ** → ಇದು ನಂಬಿಗಸ್ತಿಕೆಗೆ ಸೂಚಿತವಾಗಿದೆ.

**ಧೂಮ್ರ** → ಇದು ರಾಜವೈಭವವನ್ನು ಸೂಚಿಸುತ್ತದೆ.

**ರಕ್ತವರ್ಣ** → ಇದು ಈಡು ಬಲಿಯ ರಕ್ತವನ್ನು ಸೂಚಿಸುತ್ತದೆ.

**"ಪರಿಶುದ್ಧನೂ ನಿರ್ದೋಷಿಯೂ ನಿಷ್ಕಳಂಕನೂ ಪಾಪಿಗಳಲ್ಲಿ ಸೇರದವನು."**

### ಆದರೆ ಯೇಸು ಏಕೆ ಈ ಎಲ್ಲಾ 'ಪರದೆ'ಗಳ ಬಳಿ ಕಾಣಿಸಿಕೊಳ್ಳಬೇಕು?

ಅದಕ್ಕೆ ಉತ್ತರವನ್ನು ಸ್ವತಃ ಯೇಸುವೇ ಹೇಳಿ ನಮಗೆ ಕೆಳಗಿನ
ವಾಕ್ಯದಲ್ಲಿ ತಿಳಿಸುತ್ತಾನೆ –

## ಯೋಹಾನ 14:6

**"ಯೇಸು ಅವನಿಗೆ – ನಾನೇ ಮಾರ್ಗವೂ ಸತ್ಯವೂ ಜೀವವೂ ಆತ್ತದ್ದೇನೆ."**

ಅಗೋ! ಅವುಗಳೇ..... ಆ ಮೂರು ಪರದೆಗಳು!!

ಅಪ್ಪೋಸ್ತಲನಾದ ತೋಮನ ಬಳಿ ಯೇಸು ಮಾತನಾಡುತ್ತಿದ್ದಾಗ
ಆ ಮೂರು ಪರದೆಯನ್ನು ಕುರಿತು ಹೇಳಿದನು!

ಓಹ್! ಇಷ್ಟು ವರ್ಷಗಳಿಂದ ನಾವೂ ಸಹ ಇದನ್ನು ಗ್ರಹಿಸಿರಲಿಲ್ಲ!!

ಹೌದು! ಕ್ರೈಸ್ತನ ಬೆಳವಣಿಗೆಯ ವಿಧಾನದಲ್ಲಿ ಕರ್ತನಾದ ಯೇಸು ತಾನೆ ಪ್ರತಿ
ಹೆಜ್ಜೆಯಲೂ ನಡೆಸುತ್ತಾನೆ ಮತ್ತು ಮಾರ್ಗದರ್ಶನ ನೀಡುತ್ತಾನೆ –

➡ ವಿಶ್ವಾಸಿಯಿಂದ ಮೊದಲುಗೊಂಡು ("ಮಾರ್ಗ" – "ಬಾಗಿಲು")

➡ ಹಿಂಬಾಲಕನವರೆಗೂ ("ಸತ್ಯ" – "ಪರಿಶುದ್ಧ ಪರದೆ")

➡ ಮತ್ತು ಕೊನೆಯದಾಗಿ "ಮೊದಲ ಪುನರುತ್ಥಾನ" ಹೊಂದಲು
("ಜೀವವೂ" – "ಮಹಾ ಪವಿತ್ರ ಪರದೆ")

ಇದು ಪರಲೋಕಕ್ಕೇ ಕೊಂಡೊಯ್ಯುತ್ತದೆ ಎಂದು ಸ್ವತಃ
ಆತನ ವಾಕ್ಯದಲ್ಲಿ ಓದೋಣ –

## ಯೋಹಾನ 6:44

**"ನನ್ನನ್ನು ಕಳುಹಿಸಿಕೊಟ್ಟಂಥ ತಂದೆಯು ಎಳೆದ ಹೊರತು ಯಾವನೂ ನನ್ನ ಬಳಗೆ
ಬರಲಾರನು; ಮತ್ತು ನಾನು ಅವನನ್ನು ಕಡೇ ದಿನದಲ್ಲ ಎಬ್ಬಿಸುವೆನು."**

ಓಹ್! ರಕ್ಷಕನ ಮಾತುಗಳು ಎಷ್ಟು ಅದ್ಭುತವಾಗಿ ಸೂಚಿತವಾಗಿದೆ –

## ಮತ್ತಾಯ 28:20

**ನೋಡಿರಿ, ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ
ನಿಮ್ಮ ಸಂಗಡ ಇರುತ್ತೇನೆ...."**

ಮನುಷ್ಯನ ದೇಹವು ಸಾಯುವದನ್ನು ಸೂಚಿಸುತ್ತದೆ ಏಕೆಂದರೆ ಈ ತೆರೆಯ ಹಿಂದಿರುವ

"ಮಹಾ ಪವಿತ್ರ" ಸ್ಥಳವು ಪರಲೋಕವನ್ನು ಸೂಚಿಸುತ್ತದೆ ಏಕೆಂದರೆ ಪರಲೋಕದಲ್ಲಿ ಪ್ರವೇಶಿಸುವಾಗನಾವು ಆತ್ಮೀಕ ದೇಹಗಳನ್ನು ಹೊಂದುತ್ತೇವೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**1 ಕೊರಿಂಥದವರಿಗೆ 15:50,51**

**"ಸಹೋದರರೇ, ನಾನು ಹೇಳುವದೇನೆಂದರೆ – ಶಕ್ತ ಮಾಂಸವು ದೇವರ ರಾಜ್ಯಕ್ಕೆ ಬಾಧ್ಯವಾಗಲಾರದು;ಲಯವಾಗುವ ವಸ್ತು ನಿರ್ಲಯ ಪದವಿಗೆ ಬಾಧ್ಯವಾಗುವದಿಲ್ಲ. ಕೇಳಿರಿ, ಇದುವರೆಗೆ ಗುಪ್ತವಾಗಿದ್ದ ಸಂಗತಿಯನ್ನು ನಿಮಗೆ ತಿಳಿಸುತ್ತೇನೆ. ನಾವೆಲ್ಲರೂ ನಿದ್ರೆ ಹೋಗುವದಿಲ್ಲ; ಆದರೆ ಕಡೇ ತುತೂರಿಯ ಧ್ವನಿಯಾಗುವಾಗ ನಾವೆಲ್ಲರು ಒಂದು ಕ್ಷಣದಲ್ಲೇ ರಪ್ಪೆ ಬಡಿಯುವಷ್ಟರೊಳಗಾಗಿ ಮಾರ್ಪಡುವೆವು."**

ಹೌದು! ಈ ವಿಷಯ ಎಷ್ಟು ಸ್ಪಷ್ಟವಾಗಿದೆ!

**ಕೊನೆಯದಾಗಿ, ಚಮತ್ಕಾರವಾಗಿ ಕಸೂತಿ ಹಾಕಿ ಮಾಡಿರುವ "ತೆರೆ"ಯಲ್ಲಿರುವ ಎರಡು "ಕೆರೂಬಿಗಳು" ಏನ್ನನ್ನು ಸೂಚಿಸುತ್ತದೆ?**

ನಮಗೆಲ್ಲಾ ಗೊತ್ತಿರುವ ಹಾಗೆ ಯಾಜಕರು "ಪವಿತ್ರ" ಸ್ಥಳದಲ್ಲಿ ಸೇವೆ ಮಾಡುವಾಗ
ಈ ತೆರೆಯಲ್ಲಿರುವ ಎರಡು ಕೆರೂಬಿಗಳನ್ನು ನೋಡುವರು.

ಇದು ಪ್ರತಿಷ್ಠೆ ಮಾಡಿಕೊಂಡಿರುವ ಕ್ರೈಸ್ತರು ಇಕ್ಕಟ್ಟಾದ ದಾರಿಯಲ್ಲಿ ಶೋಧನೆಗಳನ್ನು ಎದುರಿಸುವಾಗ ಅವರು ಈ ಎರಡು "ಕೆರೂಬಿಗಳನ್ನು" ನೋಡುವರು.

## ಈ ಎರಡು ಕೆರೂಬಿಗಳು ಎಂದರೇನು?

ನಮಗೆ ಗೊತ್ತಿರುವದೇನೆಂದರೆ ಪ್ರಕಟನೆ **4**ನೇ ಅಧಿಕಾರದಲ್ಲಿರುವ "ನಾಲ್ಕು ಜೀವಿಗಳು" ಯೆಹೆಜ್ಕೇಲನು ಪುಸ್ತಕದಲ್ಲಿರವ ಜೀವಿಗಳಿಗೆ ಅನುಗುಣವಾಗಿದೆ.

ಅವು ದೇವರ ಗುಣಲಕ್ಷಣಗಳನ್ನು ಸೂಚಿಸುತ್ತದೆ.
ಅದೇ ರೀತಿ ಈ "ಕೆರೂಬಿಗಳು" ದೇವರ ಗುಣಲಕ್ಷಣಗಳನ್ನು ಸೂಚಿಸುತ್ತದೆ.
ಇಲ್ಲಿ ಈ "ಕೆರೂಬಿಗಳು" ದೇವರ ಎರಡು ಗುಣಲಕ್ಷಣಗಳನ್ನು ಸೂಚಿಸುತ್ತದೆ!

**ಅವು ಶೋಧನೆಗಳಲ್ಲಿರುವ ಕ್ರೈಸ್ತರಿಗೆ ಉತ್ತೇಜನ ನೀಡುವದರಲ್ಲಿ ಬಹಳ ಸಹಕಾರಿಯಾಗಿದೆ!**

**ಈ ಎರಡು ಗುಣಲಕ್ಷಣಗಳು ಯಾವುವು?**

ಮೊದಲನೆಯದು ಪ್ರೀತಿ (ಯಾಗಿದೆ)

ಯಜಮಾನನಾದ ಯೇಸುವಿನ ಹಿಂಬಾಲಕರ ಮೇಲಿರುವ ದೇವರ ಮಹಾ ಪ್ರೀತಿಯನ್ನು
ಕೆಳಗಿನ ವಾಕ್ಯದಲ್ಲಿ ಯೇಸು ವಿವರಿಸಿದ್ದಾನೆ –

**ಯೋಹಾನ 16:27**

**"ನೀವು ನನ್ನ ಮೇಲೆ ಮಮತೆಯಿಟ್ಟು ನನ್ನನ್ನು ತಂದೆಯ ಬಳಿಯಿಂದ ಹೊರಟುಬಂದವನೆಂದು ನಂಬಿದ್ದರಿಂದ ತಂದೆಯು ತಾನೇ ನಿಮ್ಮ ಮೇಲೆ ಮಮತೆ ಇಡುತ್ತಾನಲ್ಲವೇ."**

**ಎರಡನೆಯ ಮಹಾ ಉತ್ತೇಜನದ ಗುಣಲಕ್ಷಣವು ಬಲ(ವಾಗಿದೆ)!**

ಹೌದು! ಎಲ್ಲಾ ಕಡೆಗಳಿಂದಲೂ ಶೋಧನೆ ಮತ್ತು ಸಂಕಟಗಳು ಬರುವಾಗ ನಮ್ಮ
ಮನಸ್ಸಿಗೆ ಬರುವ ಬಲವುಳ್ಳ ದೇವರ ಜ್ಞಾನದ ವಾಕ್ಯವು ಯಾವುದೆಂದರೆ –

**ರೋಮಾಪುರದವರಿಗೆ 8:31**

**“ಹಾಗಾದರೆ ಈ ವಿಷಯಗಳಲ್ಲಿ ನಾವು ಏನು ಹೇಳೋಣ? ದೇವರು ನಮ್ಮ ಕಡೆ ಇದ್ದರೆ ನಮ್ಮನ್ನು ಎದುರಿಸುವವರು ಯಾರು?"**


**ಹೌದು! ನಂಬಿಗಸ್ತಿಕೆಯುಳ್ಳವರಾಗುವದಕ್ಕಾಗಿ ಕ್ರೈಸ್ತನಿಗೆ ದೇವರ ಪ್ರೀತಿ ಮತ್ತು ಬಲ ಇವೆರಡೂ ಬಹಳ ಉತ್ತೇಜನ ನೀಡಿ ಶಕ್ತಿಯನ್ನು ಕೊಡುತ್ತದೆ!!**

ಈಗ ನಾವು "ಅತಿ ಪವಿತ್ರ" ಎಂದು ಕರೆಯಲ್ಪಡುವ ಗುಡಾರದ ಅತ್ಯಂತ ಒಳಗಿನ ಕೋಣೆಯೊಳಗೆ ಪ್ರವೇಶಿಸೋಣ!

ಅದನ್ನು "ಪವಿತ್ರಗಳಲ್ಲಿ ಅತಿ ಪವಿತ್ರ" ಎಂದೂ ಕರೆಯಲಾಗುತ್ತದೆ ಮತ್ತು ಅದರ ಅಳತೆಯು 10 ಮೊಳ ಎತ್ತರ/ಅಗಲ ಮತ್ತು ಉದ್ದವಾಗಿದೆ.

ಅದೊಂದು ಪರಿಪೂರ್ಣ ಘನಾಕೃತಿಯಾಗಿದೆ ಅದು **15** ಅಡಿ ಅಗಲ ಮತ್ತು **15** ಅಡಿ ಉದ್ದ ಮತ್ತು **15** ಅಡಿ ಎತ್ತರವಾಗಿದೆ.

ಅದರೊಳಗೆ ಒಂದೇ ಒಂದು ಪೀಠೋಕರಣವಿತ್ತು ಅದು ಯಾವುದೆಂದರೆ –



## ಒಡಂಬಡಿಕೆಯ ಮಂಜೂಷ



ಅದರ ವಿವರವನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದೋಣ –

### ಇಬ್ರಿಯರಿಗೆ 9:3-5 / ವಿಮೋಚನಕಾಂಡ 37:1-9

"ಎರಡನೆಯ ತೆರೆಯ ಆಚೆಯಲ್ಲಿ ಅತಿ ಪವಿತ್ರ ಸ್ಥಾನವೆನಿಸಿಕೊಳ್ಳುವ ಇನ್ನೊಂದು ಭಾಗವಿತ್ತು; ಅದರಲ್ಲಿ ಚಿನ್ನದ ಧೂಪಾರತಿ, ಒಳಗೂ ಹೊರಗೂ ಚಿನ್ನದ ತಗಡನ್ನು ಮಡಾಯಿಸಿದ್ದ ಒಡಂಬಡಿಕೆಯ ಮಂಜೂಷ ಇವುಗಳಿದ್ದವು; ಆ ಮಂಜೂಷದೊಳಗೆ ಮನ್ನಾ ಇಟ್ಟಿದ್ದ ಚಿನ್ನದ ಪಾತ್ರೆಯೂ ಆರೋನನ ಚಿಗುರಿದ ಕೋಲೂ ಒಡಂಬಡಿಕೆ ಬರೆದಿದ್ದ ಕಲ್ಲಿನ ಹಲಿಗೆಗಳೂ ಇದ್ದವು."

"ಬೆಚಲೇಲನು ಜಾಲೀಮರದಿಂದ ಮಂಜೂಷವನ್ನು ಮಾಡಿದನು. ಅದು ಎರಡುವರೆ ಮೊಳ ಉದ್ದವೂ (ಜಾ 3/4 ಅಡಿ) ಮತ್ತು ಒಂದುವರೆ ಮೊಳ ಅಗಲವೂ (2 1/4 ಅಡಿ) ಎತ್ತರವೂ ಆಗಿತ್ತು....."

ಈ "ಒಡಂಬಡಿಕೆಯ ಮಂಜೂಷವು" ಸಮಚತುಷ್ಕೋನ
ಆಕಾರದ ಪೆಟ್ಟಿಗೆಯಾಗಿದೆ.
ಮತ್ತು ಚೊಕ್ಕ ಬಂಗಾರ ತಗಡನ್ನು ಹೊದಿಸಲಾಗಿತ್ತು ಮತ್ತು
ಅದೇ ಬಂಗಾರದಿಂದ ಎರಡು ಕೆರೂಬಿಗಳನ್ನು ಕೆತ್ತಲಾಗಿತ್ತು.
ಈ ಎರಡೂ ಕೆರೂಬಿಗಳು ತಮ್ಮ ರೆಕ್ಕೆಗಳನ್ನು ಮೇಲಕ್ಕೆತ್ತಿ ಹಾರುವದಕ್ಕೆ
ಸಿದ್ಧವಾಗಿರುವಂತೆ ಕಾಣುತ್ತಿತ್ತು !!!
ಈಗ ಮಹಾಯಾಜಕನು ಈ "ಕೃಪಾಸನದ" ಮೇಲೆ ಪಾಪ ನಿವಾರಣೆಯ ಬಲಿಯ
ದಿನದಲ್ಲಿ ರಕ್ತವನ್ನು ಚಿಮುಕಿಸುತ್ತಿದ್ದನು.
ಈ "ಮಂಜೂಷ" ಪೆಟ್ಟಿಗೆಯ ಒಳಗೆ ಮೂರು ವಸ್ತುಗಳಿದ್ದವು (ಇಬ್ರಿಯ 9:4)

## ಮನ್ನಾ ಇಟ್ಟಿದ್ದ ಚಿನ್ನದ ಪಾತ್ರೆ

### ವಿಮೋಚನಕಾಂಡ 16:32

"ಮೋಶೆಯು ಜನರಿಗೆ–ಯೆಹೋವನು ಇದರ ವಿಷಯದಲ್ಲಿ ಆಜ್ಞಾಪಿಸಿದ್ದೇನಂದರೆ–
ನಾನು ಐಗುಪ್ತ ದೇಶದಿಂದ ನಿಮ್ಮನ್ನು ಹೊರಗೆ ಬರಮಾಡಿದಾಗ ಅರಣ್ಯದಲ್ಲಿ
ತಿನ್ನುವದಕ್ಕೆ ಕೊಟ್ಟ ಆಹಾರವನ್ನು ನಿಮ್ಮ ಸಂತಾನದವರು ನೋಡುವ ಹಾಗೆ
ಅವರಿಗೋಸ್ಕರ ನೀವು ಒಂದು ಗೋಮೆರ್ ತುಂಬಾ ಮನ್ನವನ್ನು ಇಟ್ಟು ಕೊಳ್ಳಬೇಕು
ಎಂದು ಹೇಳಿದನು. ಆದಕಾರಣ ಮೋಶೆಯು ಆರೋನನಿಗೆ–ನೀನು ಒಂದು
ಪಾತ್ರೆಯನ್ನು ತೆಗೆದುಕೊಂಡು ಅದರಲ್ಲಿ ಒಂದು ಗೋಮೆರಿನಷ್ಟು ಮನ್ನವನ್ನು ಹಾಕಿ
ನಿಮ್ಮ ಸಂತತಿಯವರುನೋಡುವದಕ್ಕೋಸ್ಕರ ಅದನ್ನು ಯೆಹೋವನ ಸನ್ನಿಧಿಯಲ್ಲಿ ಇಡು
ಎಂದು ಹೇಳಿದನು. ಯೆಹೋವನು ಮೋಶೆಗೆ ಆಜ್ಞಾಪಿಸಿದಂತೆ ಆರೋನನು ಮಾಡಿ
ಆಜ್ಞಾ ಶಾಸನಮಂಜೂಷದ ಮುಂದೆ ಅದನ್ನು ಇಟ್ಟನು."

## ಆರೋನನ ಚಿಗುರಿದ ಕೋಲು

### ಅರಣ್ಯಕಾಂಡ 17:8

"ಮರುದಿನ ಮೋಶೆ ಗುಡಾರದಲ್ಲಿ ಹೋಗಿ ನೋಡಲಾಗಿ ಆಹಾ,
ಲೇವಿಕುಲಕ್ಕೋಸ್ಕರ

ಆರೋನನು ಕೊಟ್ಟಿದ್ದ ಕೋಲು ಚಿಗುರಿ ಮೊಗ್ಗೆಬಿಟ್ಟು ಹೂವರಳಿ
ಬಾದಾಮಿ ಹಣ್ಣುಗಳನ್ನು ಫಲಿಸಿತ್ತು."

## ಒಡಂಬಡಿಕೆ ಬರೆದಿದ್ದ ಎರಡು ಕಲ್ಲಿನ ಹಲಗೆಗಳು

**ಧರ್ಮೋಪದೇಶಕಾಂಡ 31:26**

**"ನೀವು ಈ ಧರ್ಮಶಾಸ್ತ್ರಪುಸ್ತಕವನ್ನು ನಿಮ್ಮ ವಶಕ್ಕೆತೆಗೆದುಕೊಂಡು ನಿಮ್ಮ ದೇವರಾದ ಯೆಹೋವನ ಆಜ್ಞಾಶಾಸನಗಳ ಮಂಜೂಷದ ಬಳಿಯಲ್ಲಿ ಇಡಿರಿ. ಇಸ್ರಾಯೇಲ್ಯರೇ, ಅಲ್ಲಿ ಇದು ನಿಮಗೆ ವಿರೋಧವಾಗಿ ಸಾಕ್ಷಿಕೊಡುವದಾಗಿರಲಿ."**

ಕೊನೆಯದಾಗಿ "ಕೃಪಾಸನದ" ಮೇಲೆ ಮತ್ತು ಎರಡು ಕೆರೂಬಿಗಳ ಮಧ್ಯೆ ಅತಿಶಯವಾದ ಬೆಳಕು ಕಾಣಿಸಿತು ಮತ್ತು

ಇಬ್ರಿಯ ಭಾಷೆಯಲ್ಲಿ ಅದನ್ನು "ಶೆಕಿನಾಬೆಳಕು" ಎಂದು ಕರೆಯಲಾಗುತ್ತದೆ.

**ಮಹಾ ಪವಿತ್ರ ಸ್ಥಾನದಲ್ಲಿದ್ದ ಬೆಳಕು ಇದೊಂದೇ ಆಗಿತ್ತು**

**ಇವೆಲ್ಲಾ ಏನ್ನನ್ನು ಸೂಚಿಸುತ್ತದೆ?**

ಈಗ ನಾವು ಮೊದಲೇ ನೋಡಿದ ಹಾಗೆ "ಅತಿ ಪವಿತ್ರ" ಸ್ಥಾನವು ಸ್ವತಃ ಪರಲೋಕವನ್ನು ಸೂಚಿಸುತ್ತದೆ ಮತ್ತು ಕ್ರಿಸ್ತನ ಶರೀರದ ಕೊನೆಯ ಪರಿಸ್ಥಿತಿಯಾಗಿದೆ–

ಯೇಸು ಕ್ರಿಸ್ತನ ಸಭೆ......

........."ಆತ್ಮೀಕ ಮನಸ್ಸುಗಳು" ಮಾತ್ರವಲ್ಲದೆ ("ಪವಿತ್ರತೆಯ" ಸ್ಥಿತಿ) ದೇವರು ಮತ್ತು

.........ಯೇಸುವಿನ ಮಹಿಮೆಯಲ್ಲಿ ಆತ್ಮೀಕ ಶರೀರವನ್ನು ಸಹ ಹೊಂದಿರುವರು!!!

**'ಒಡಂಬಡಿಕೆಯ ಮಂಜೂಷವು' ಏನ್ನನ್ನು ಸೂಚಿಸುತ್ತದೆ?**

ಇದು ಇಡೀ ವಿಶ್ವದ ಮಹಿಮೆಯುಳ್ಳ "ಕಣ್ಣಿಗೆ ಕಾಣದ ದೇವರಿಗೆ" ಸೂಚಿತವಾಗಿದೆ –

ನಮ್ಮ ಪರಲೋಕದ ತಂದೆಯನ್ನು ನಾವು ಹೇಗೆ ಅರ್ಥಮಾಡಿಕೊಳ್ಳುತ್ತೇವೆ ಮತ್ತು

ಆತನ ದೈವೀಕ ಗುಣಲಕ್ಷಣಗಳ ಮೂಲಕ ಆತನನ್ನು ಹೇಗೆ ಗ್ರಹಿಸಿ ತಿಳಿದು ಕೊಳ್ಳುತ್ತೇವೆ ಎಂಬುದನ್ನು ಸೂಚಿಸುತ್ತದೆ ಮತ್ತು ಇತರೆ.....

ಈಗ ನಾವು ಆ "ಮಂಜೂಷದ" ವಿವಿಧ ಭಾಗಗಳ ಅರ್ಥಗಳನ್ನು ಕುರಿತು ನೋಡೋಣ –

**ಕೃಪಾಸನ**

– ನಾವು ಮೊದಲೇ ನೋಡಿದಂತೆ ಪ್ರತಿವರ್ಷ ಮಹಾಯಾಜಕನು ಅತಿಪವಿತ್ರ ಸ್ಥಾನದೊಳಗೆ ಪ್ರವೇಶಿಸಿ ಈ "ಕೃಪಾಸನದ" ಮೇಲೆ ಪಾಪ ನಿವಾರಣೆ ಬಲಿಯ ದಿನದಲ್ಲಿ ರಕ್ತವನ್ನು ಚಿಮುಕಿಸುತ್ತಿದ್ದನು.

ಏಕೆಂದರೆ "ಕೃಪಾಸನವು" ದೇವರ ನ್ಯಾಯ ವಿಚಾರಣೆಯ ಗುಣಲಕ್ಷಣವನ್ನು ಸೂಚಿಸುತ್ತದೆ.

ರಕ್ತವು "ಜೀವವನ್ನು" ಸೂಚಿಸುತ್ತದೆ (ಯಾಜಕಕಾಂಡ 17:11)

ಮತ್ತು ಇದು "....ಜೀವಕ್ಕೆ ಜೀವ" ಎಂಬ ನ್ಯಾಯತೀರ್ಪನ್ನು ತೃಪ್ತಿ ಪಡಿಸುವದನ್ನು ಸೂಚಿಸುತ್ತದೆ.

**ಪೆಟ್ಟಿಗೆ**

– ಇದು ದೇವರ ಎರಡನೆಯ ಗುಣಲಕ್ಷಣವಾದ ಜ್ಞಾನ (ವನ್ನು) ಸೂಚಿಸುತ್ತದೆ.

**ಇದು ಹೇಗೆಂದು ನೀವು ಕೇಳಬಹುದು?**

ಈಗ ಈ ವಿಷಯವನ್ನು ಕುರಿತು ನೋಡೋಣ –

ದೇವರ ಜ್ಞಾನವನ್ನು ಯೇಸುವಿನಲ್ಲಿ ಅನುಕರಿಸಲಾಗಿದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**1 ಕೊರಿಂಥದವರಿಗೆ 1:30 / ಜ್ಞಾನೋಕ್ತಿಗಳು 8:12**

**"ನೀವು ಕ್ರಿಸ್ತ ಯೇಸುವಿನಲ್ಲಿರುವದು ಆತನಿಂದಲೇ, ಕ್ರಿಸ್ತ ಯೇಸು ನಮಗೆ ದೇವರ ಕಡೆಯಿಂದ ಜ್ಞಾನವೂ ನೀತಿ ಶುದ್ಧೀಕರಣ ವಿಮೋಚನೆಗಳಿಗೆ ಕಾರಣನೂ ಆದನು."**

**"ಜ್ಞಾನವೆಂಬ ನನಗೆ ಜಾಣ್ಮೆಯೇ ನಿವಾಸ"**

ಹೌದು! ದೇವರ ಜ್ಞಾನವು ಶರೀರಧಾರಿಯಾದ ಯೇಸುವಿನಲ್ಲಿ ಸೂಚಿತವಾಗಿದೆ!

ಈ ಪೆಟ್ಟಿಗೆಯಲ್ಲಿ "ಗುಟ್ಟಾಗಿ" ಇರುವ ವಸ್ತುಗಳು ಏನ್ನನ್ನು ಸೂಚಿಸುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ಓದೋಣ –

**ರೋಮಾಪುರದವರಿಗೆ 16:25 / ಎಫೆಸದವರಿಗೆ 3:6**

"ಅನಾದಿಯಾಗಿ ಗುಪ್ತವಾಗಿದ್ದ ಮರ್ಮವು ಈಗ ಪ್ರಕಾಶಕ್ಕೆ ಬಂದು ನಿತ್ಯನಾದ ದೇವರ ಅಪ್ಪಣೆಯ ಪ್ರಕಾರ......."

"ಅದು ಯಾವದಂದರೆ, ಅನ್ಯಜನರು ಸುವಾರ್ತೆಯ ಮೂಲಕ ಕ್ರಿಸ್ತ ಯೇಸುವಿನಲ್ಲಿರುವವರಾಗಿ ಯೆಹೂದ್ಯರೊಂದಿಗೆ ಬಾಧ್ಯರೂ ಒಂದೇ ದೇಹದೊಳಗಣ ಅಂಗಗಳೂ ಅಬ್ರಹಾಮನಿಗುಂಟಾದ ವಾಗ್ದಾನದಲ್ಲಿ ಪಾಲುಗಾರರೂ ಆಗಿದ್ದಾರೆಂಬದೇ."

ಹೌದು! ಕ್ರಿಸ್ತನ ಅತಿದೊಡ್ಡ ರಹಸ್ಯವಾಗಿದೆ!

ಯೇಸು ಮತ್ತು "ಆತನಲ್ಲಿ" ಆತನ ಶರೀರ ಸಭೆಯಾದ **1,44,000!!**

**ಪೆಟ್ಟಿಗೆಯಲ್ಲಿರುವ ಮೂರು "ವಸ್ತುಗಳು" ಕ್ರಿಸ್ತನ ಗುಣಲಕ್ಷಣಗಳನ್ನು ಸೂಚಿಸುತ್ತದೆ - ಮೊದಲನೆಯದಾಗಿ ಯೇಸು ನಂತರ ಆತನಲ್ಲಿ ಅಡಗಿರುವ - ಸಭೆ!!**

## ಆರೋನನ ಚಿಗುರಿದ ಕೋಲು

ಇದು ದೇವರಿಂದ ರಾಜವಂಶಸ್ಥರಾದ "ಯಾಜಕತ್ವಕ್ಕೆ" ಆಯ್ಕೆಯಾದ ಕ್ರಿಸ್ತನನ್ನು ಸೂಚಿಸುತ್ತದೆ.

**ಮೊದಲು ಯೇಸು** → ಇಬ್ರಿಯರಿಗೆ 5:6 – "......ಈ ಗೌರವವನ್ನು ಆತನಿಗೆ ಕೊಟ್ಟನು. ಆತನು ಇನ್ನೊಂದುಸ್ಥಳದಲ್ಲಿ – ನೀನು ಸದಾಕಾಲವೂ ಮೆಲ್ಕಿಜೆದೇಕನ ತರಹದ ಯಾಜಕನು ಎಂದು ಹೇಳುತ್ತಾನೆ."

**ನಂತರ ಸಭೆಯೂ ಸಹ** → 1 ಪೇತ್ರ 2:9 "ನೀವಾದರೋ ನಿಮ್ಮನ್ನು ಕತ್ತಲೆಯೊಳಗಿಂದ ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸಿದಾತನ ಗುಣಾತಿಶಯಗಳನ್ನು ಪ್ರಚಾರಮಾಡುವವರಾಗುವಂತೆ ದೇವರಾದುಕೊಂಡ ಜನಾಂಗವೂ ರಾಜವಂಶಸ್ಥರಾದ ಯಾಜಕರೂ ಮೀಸಲಾದ ಜನವೂ ದೇವರ ಸ್ವಕೀಯ ಪ್ರಜೆಯೂ ಆಗಿದ್ದೀರಿ."

## ಒಡಂಬಡಿಕೆ ಬರೆದಿದ್ದ ಎರಡು ಕಲ್ಲಿನ ಹಲಗೆಗಳು

**ಮೊದಲು ಯೇಸು** ➡ ಅಪೋಸ್ತಲರ ಕೃತ್ಯಗಳು 17:31 – "ಯಾಕಂದರೆ ಆತನು ನಿಷ್ಕರ್ಷೆಮಾಡಿದ ಪುರುಷನ ಕೈಯಿಂದ ನೀತಿಗನುಸಾರವಾಗಿ ಭೂಲೋಕದ ನ್ಯಾಯವಿಚಾರಣೆ ಮಾಡುವದಕ್ಕೆ ಒಂದು ದಿವಸವನ್ನು ಗೊತ್ತುಮಾಡಿದ್ದಾನೆ. ಅವನನ್ನು ಸತ್ತವರೊಳಗಿಂದ ಎಬ್ಬಿಸಿದ್ದರಲ್ಲಿ ಇದನ್ನು ನಂಬುವದಕ್ಕೆ ಎಲ್ಲರಿಗೂ ಆಧಾರ ಕೊಟ್ಟಿದ್ದಾನೆ ಅಂದನು."

**ನಂತರ ಸಭೆಯೂ ಸಹ** ➡ 1 ಕೊರಿಂಥದವರಿಗೆ 6:2 – "ದೇವಜನರು ಲೋಕಕ್ಕೆ ತೀರ್ಪುಮಾಡುವರೆಂಬದು ನಿಮಗೆ ತಿಳಿಯದೋ? ಲೋಕವು ನಿಮ್ಮಿಂದ ತೀರ್ಪನ್ನು ಹೊಂದಬೇಕಾಗಿರುವಲ್ಲಿ ಅತ್ಯಲ್ಪ ಸಂಗತಿಗಳನ್ನು ಕುರಿತುತೀರ್ಪುಮಾಡುವದಕ್ಕೆ ಅಯೋಗ್ಯರಾಗಿದ್ದೀರೋ?"

## ಮನ್ನಾ ಇಟ್ಟಿದ್ದ ಚಿನ್ನದ ಪಾತ್ರೆ

**ಮೊದಲು ಯೇಸು** ➡ ಪ್ರಕಟನೆ 1:18 – "ಸತ್ತವನಾದೆನು, ಮತ್ತು ಇಗೋ ಯುಗಯುಗಾಂತರಗಳಲ್ಲಿಯೂ ಬದುಕುವವನಾಗಿದ್ದೇನೆ; ಮರಣದ ಮತ್ತು ಪಾತಾಳದ ಬೀಗದಕ್ಕೈಗಳು ನನ್ನಲ್ಲಿ ಅವೆ."

**ನಂತರ ಸಭೆಯೂ ಸಹ** ➡ 2 ಪೇತ್ರ 1:4 – "ನೀವು ಲೋಕದಲ್ಲಿ ದುರಾಶೆಯಿಂದುಂಟಾದ ಕೆಟ್ಟತನಕ್ಕೆ ತಪ್ಪಿಸಿಕೊಂಡು ದೈವಸ್ವಭಾವದಲ್ಲಿ ಪಾಲನ್ನು ಹೊಂದುವವರಾಗಬೇಕೆಂಬ ಉದ್ದೇಶದಿಂದ ದೇವರು ತನ್ನ ಪ್ರಭಾವಗುಣಾತಿಶಯಗಳಿಂದ ಅಮೂಲ್ಯವಾಗಿಯೂ ಉತ್ಕೃಷ್ಟವಾಗಿಯೂ ಇರುವ ವಾಗ್ದಾನಗಳನ್ನು ನಮಗೆ ದಯಪಾಲಿಸಿದ್ದಾನೆ."

ಈ ಪೆಟ್ಟಿಗೆ ಮೇಲಿರುವ ಮುಚ್ಚುಳವು ಕ್ರಿಸ್ತನ ಮೇಲಿರುವ ದೇವರ ಅಧಿಪತ್ಯವನ್ನು ಸೂಚಿಸುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**1 ಕೊರಿಂಥದವರಿಗೆ 11:3**

"ಕ್ರಿಸ್ತನಿಗೆ ದೇವರು ತಲೆ ಆಗಿದ್ದಾನೆ"

☞ ಕೊನೆಯದಾಗಿ ಎರಡು ಕೆರೂಬಿಗಳು ಏನನ್ನು ಸೂಚಿಸುತ್ತದೆ? ಅವು ದೇವರ ಉಳಿದ ಎರಡು ಗುಣಲಕ್ಷಣಗಳನ್ನು ಸೂಚಿಸುತ್ತದೆ.

ಅವು ಯಾವುವೆಂದರೆ –

**ಪ್ರೀತಿ ಮತ್ತು ಬಲ(ಶಕ್ತಿ)**

ಅವುಗಳನ್ನು ಏಕೆ "ಕೃಪಾಸನವನ್ನು" ನೋಡುತ್ತಾ ಸಿದ್ಧವಾಗಿದ್ದು ಕಾಯುತ್ತಿರುವಂತೆ ತೋರಿಸಲಾಗಿದೆ?

ಏಕೆಂದರೆ ಕ್ರಿಸ್ತನ ಪಾಪನಿವಾರಣಾ ಬಲಿಯ ಕೆಲಸ ಪೂರ್ಣವಾಗುವವರೆಗು ದೇವರ ಪ್ರೀತಿ ಮತ್ತು ಬಲವು ಈ ಲೋಕಕ್ಕೆ ವ್ಯಕ್ತವಾಗುವುದಿಲ್ಲ.

ಆದರೆ ನ್ಯಾಯ ತೀರ್ಪು ಕೊನೆಯದಾಗಿ ತೃಪ್ತಿ ಹೊಂದಿದ ಮೇಲೆ ದೇವರ ಪ್ರೀತಿ ಮತ್ತು ಬಲವು

- ರಾಜ್ಯದ ಆಶೀರ್ವಾದಗಳಲ್ಲಿ ಮಾರ್ಗದರ್ಶನ ನೀಡುವದು –
- ಮರಣದಿಂದ ಎಲ್ಲರೂ ಎಚ್ಚೆತ್ತು ಕೊಳ್ಳುವರು

ಮತ್ತು ಇಡೀ ಲೋಕದ ಜನರು ಮಹಾ ಆಶೀರ್ವಾದಗಳನ್ನು ಮರಳಿಪಡೆದುಕೊಳ್ಳುವರು.

ಕೊನೆಯದಾಗಿ "ಶೆಕಿನಾ ಬೆಳಕು" ತಂದೆಯಾದ ದೇವರ ದೈವೀಕ ಪ್ರಸನ್ನತೆಯನ್ನು ಸೂಚಿಸುತ್ತದೆ. ಆದ್ದರಿಂದ ಇಸ್ರಾಯೇಲ್ಯರು ದೇವರನ್ನು ಈ ರೀತಿಯಾಗಿ ಸೂಚಿಸುವದನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

## ಯೆಶಾಯ 37:16

**"ಕೆರೂಬಿಗಳ ಮೇಲೆ ಆಸೀನನಾಗಿರುವಾತನೇ, ಇಸ್ರಾಯೇಲ್ ದೇವರೇ, ಸೇನಾಧೀಶ್ವರನಾದ ಯೆಹೋವನೇ, ಎಲ್ಲಾ ಭೂರಾಜ್ಯಗಳನ್ನು ಆಳುವ ದೇವರು ನೀನೊಬ್ಬನೇ; ಪರಲೋಕ, ಭೂಲೋಕಗಳನ್ನುಂಟು ಮಾಡಿದವನು ನೀನೇ."**

**ಅಗೋ! ಎಷ್ಟು ಸ್ಪಷ್ಟವಾಗಿ ಕೊಡಲಾಗಿದೆ!**

ಇದು ಎರಡು ಕೆರೂಬಿಗಳ ಮಧ್ಯೆ ಬೀಸಿದ "ಬೆಳಕಿಗೆ" ಸೂಚಿತವಾಗಿದೆ!

ಕೀರ್ತನೆಗಳಲ್ಲಿ ಕೂಡ ಅನೇಕ ವಾಕ್ಯಗಳನ್ನು ನೋಡಬಹುದು!

ಸತ್ಯವೇದದಲ್ಲಿ ಎಲ್ಲೂ "ಶೆಕಿನಾ" ಎಂಬ ಪದವು ಇಲ್ಲದೇ ಇದ್ದರೂ, ಇಬ್ರಿಯ ಭಾಷೆಯಲ್ಲಿ ಅದೊಂದು ಅತಿಶಯವಾದ ಬೆಳಕಿಗೆ ಸೂಚಿತವಾಗಿದೆ. ಇದು ಮಹಾ ಪವಿತ್ರ ಸ್ಥಾನದಲ್ಲಿ ಮಂಜೂಷ ಪೆಟ್ಟಿಗೆಯ ಮೇಲೆ ಎರಡು ಕೆರೂಬಿಗಳ ಮಧ್ಯದಲ್ಲಿತ್ತು!!

ಮುಕ್ತಾಯವಾಗಿ ಇಡೀ "ಮಂಜೂಷ"ವು ದೈವೀಕ ಕುಟುಂಬದ "ಏಕತ್ವ"ವನ್ನು ಸೂಚಿಸುತ್ತದೆ ಎಂದು ಸುಂದರವಾಗಿ ಯೇಸು ಹೇಳಿರುವದನ್ನು ಕೆಳಗಿನ ವಾಕ್ಯದಲ್ಲಿ ನೋಡುತ್ತೇವೆ –


## ಯೋಹಾನ 17:21

**"ನೀನು ನನ್ನನ್ನು ಕಳುಹಿಸಿಕೊಟ್ಟಿದ್ದೀ ಎಂದು ಲೋಕವು ನಂಬುವದಕ್ಕಾಗಿ ಅವರೆಲ್ಲರೂ ಒಂದಾಗಿರಬೇಕೆಂತಲೂ ತಂದೆಯೇ, ನೀನು ನನ್ನಲ್ಲಿಯೂ ನಾನು ನಿನ್ನಲ್ಲಿಯೂ ಇರುವ ಪ್ರಕಾರ ಅವರೂ ನಮ್ಮಲ್ಲಿ ಇರಬೇಕೆಂತಲೂ ಕೇಳಿಕೊಳ್ಳುತ್ತೇನೆ."**

ಇದಕ್ಕೆ ನಾವು "ಆಶ್ಚರ್ಯ"ಕರವಾಗಿ ಪ್ರತಿಕ್ರಿಯೆ ವ್ಯಕ್ತಪಡಿಸುತ್ತೇವೆ......

......ಆಮೆನ್.......






For Private Circulation Only

NOT FOR SALE

**Jesus Loves** *Ministry*

For free indepth Bible study contact

Br.Raju 8867768876

# 1, BETHESDA, 1st floor, Janani Enclave, 1st cross,
Thiglarapalya Andrahalli Main Rd, B'lore 560058

Email : rajudawn@yahoo.com

YouTube SUBSCRIBE TO OUR CHANNEL

Available Languages : Kannada, English, Hindi, Tamil and Telugu